ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಮಾರ್ಚ್ 29, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 318 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999





ಚಿತ್ರಗಳು: ರಫೀಕ್, ಜನತಾವಾಣಿ

**ಆಹಾ..ನೀರು..!** ಜಿಲ್ಲೆಯಾದ್ಯಂತ ಬೇಸಿಗೆಯ ತಾಪ ಮಾನ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ನೀರು, ನೆರಳಿಗಾಗಿ ಹುಡುಕಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದಾವಣಗೆರೆಯ ಶಿರಮಗೊಂಡನಹಳ್ಳಿ ಮಾರ್ಗದ ಚಾನಲ್‌ನಲ್ಲಿ (ಪಂಪ್ ಹೌಸ್ ಬಳಿ) ಹರಿಯುತ್ತಿರುವ ನೀರಿನಲ್ಲಿ ಹುಡುಗರು ಈಜಾಡುತ್ತಿರುವ ದೃಶ್ಯವಿದು. ಮತ್ತೊಂದೆಡೆ ಟಗರಿಗೂ ಮಜ್ಜನ ಮಾಡಿಸುತ್ತಿರುವುದು.

## ರಾಮೇಶ್ವರಂ ಕೆಫೆ ಸ್ಫೋಟ : ಪ್ರಮುಖ ಆರೋಪಿ ಬಂಧನ

ಬೆಂಗಳೂರು, ಮಾ.28- ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಸಂಚು ರೂಪಿಸಿದ್ದ ಪ್ರಮುಖ ಆರೋಪಿಯನ್ನು ಬಂಧಿಸುವಲ್ಲಿ ಎನ್‌ಐಎ ಯಶಸ್ವಿಯಾಗಿದೆ. 3 ರಾಜ್ಯಗಳ 18 ಸ್ಥಳಗಳಲ್ಲಿ ದಾಳಿ ನಡೆಸಿದ ಬಳಿಕ ಮುಜಾಮ್ಮಿಲ್ ಶರೀಫ್ ಎಂಬಾತನನ್ನು ಎನ್‌ಐಎ ಬಂಧಿಸಿದೆ.



ಕರ್ನಾಟಕದ 12, ತಮಿಳುನಾಡಿನ 5 ಮತ್ತು ಉತ್ತರ ಪ್ರದೇಶದ 1 ಸೇರಿದಂತೆ 18 ಸ್ಥಳಗಳಲ್ಲಿ ಎನ್‌ಐಎ ತಂಡಗಳು ದಾಳಿ ನಡೆಸಿದ ನಂತರ ಶರೀಫ್‌ನನ್ನು ಬೆಂಗಳೂರಿನಿಂದ ಕರೆದೊಯ್ದು ಸಹ ಸಂಚುಕೋರನೆಂದು ಪರಿಗಣಿಸಿ ಕಸ್ಟಡಿಯಲ್ಲಿ ಇರಿಸಲಾಗಿದೆ ಎಂದು ಎನ್‌ಐಎ ಗುರುವಾರ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನ ಬ್ರೂಕ್‌ಫೀಲ್ಡ್‌ನ ಐಟಿಪಿಎಲ್ ರಸ್ತೆಯಲ್ಲಿರುವ ಜನನಿಬಿಡ ಜನಪ್ರಿಯ ರೆಸ್ಟೋರೆಂಟ್‌ನಲ್ಲಿ ಮಾರ್ಚ್ 1 ರಂದು ಹ್ಯಾಂಡ್‌ಬ್ಯಾಗ್‌ನಲ್ಲಿ ಬಚ್ಚಿಟ್ಟಿದ್ದ ಸುಧಾರಿತ ಸ್ಫೋಟಕ ಸಾಧನ ಸ್ಫೋಟಗೊಂಡ ನಂತರ ನೌಕರರು ಮತ್ತು ಗ್ರಾಹಕರು ಸೇರಿದಂತೆ ಒಂಬತ್ತಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

## ಗೌಡರ ವಿರುದ್ಧ ಹೋರಾಟ ಹೊಸದೇನಲ್ಲ: ಡಿಕೆಶಿ

ಬೆಂಗಳೂರು, ಮಾ. 28- ಚುನಾವಣಾ ಹೋರಾಟ ನಮಗೆ ಹೊಸತಲ್ಲ. ದೇವೇಗೌಡರ ಕುಟುಂಬದ ವಿರುದ್ಧ ಅನೇಕ ಚುನಾವಣೆಗಳನ್ನು ಮಾಡಿದ್ದೇವೆ ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರ ವಿರುದ್ಧ ಒಬ್ಬ ಮಹಿಳೆಯನ್ನು ನಿಲ್ಲಿಸಿ ಗೆಲ್ಲಿಸಿದ್ದೇವೆ, ಕುಮಾರಸ್ವಾಮಿ ವಿರುದ್ಧವೂ ಸ್ಪರ್ಧಿಸಿ ಗೆದ್ದಿದ್ದೇನೆ, 2013ರ ಉಪಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಅನಿತಾ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಿದಾಗ ಡಿ.ಕೆ.ಸುರೇಶ್ 1.30 ಲಕ್ಷ ಮತಗಳಿಂದ ಗೆದ್ದಿದ್ದರು, ಆಗ ನಾನು ಸಚಿವನಾಗಿರಲಿಲ್ಲ, ಚುನಾವಣೆ ದೊಡ್ಡ ಸವಾಲಾಗಿತ್ತು, ಕ್ಷೇತ್ರದ ಜನ ಸುರೇಶ್ ಅವರನ್ನು ಸತತವಾಗಿ ಗೆಲ್ಲಿಸಿಕೊಂಡು ಬರುತ್ತಿದ್ದಾರೆ ಎಂದರು.

**ದೇವೇಗೌಡರ ವಿರುದ್ಧ ಒಬ್ಬ ಮಹಿಳೆಯನ್ನು ನಿಲ್ಲಿಸಿ ಗೆಲ್ಲಿಸಿದ್ದೇವೆ, ಕುಮಾರಸ್ವಾಮಿ ವಿರುದ್ಧವೂ ಗೆದ್ದಿದ್ದೇನೆ**



ಸುರೇಶ್ ಚುನಾವಣೆ ಗೆದ್ದ ಮೊದಲ ದಿನದಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ, ಕೋವಿಡ್ ಸಮಯದಲ್ಲಿ ರೈತರಿಂದ ಹಣ್ಣು-ತರಕಾರಿ (3ನೇ ಪುಟಕ್ಕೆ)

## ಆಂತರಿಕ ಕಲಹ ಹಿನ್ನೆಲೆ: 'ಪ್ರಜಾಧ್ವನಿ-2' ಪ್ರಚಾರ ರದ್ದು ಮಾಡಿದ ಕಾಂಗ್ರೆಸ್

ಬೆಂಗಳೂರು, ಮಾ. 28- ಹಾಸನ, ಕೋಲಾರ ಕಾಂಗ್ರೆಸ್‌ನಲ್ಲಿನ ಆಂತರಿಕ ಕಲಹದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಜಿಲ್ಲೆಗಳಲ್ಲಿ ಏರ್ಪಡಿಸಿದ್ದ 'ಪ್ರಜಾಧ್ವನಿ-2' ಚುನಾವಣಾ ಪ್ರಚಾರ ಕಾ ರ್ಯ ವ ನ್ನು ರದ್ದುಪಡಿಸಿದ್ದಾರೆ.



ಮು ಳ ಬಾ ಗಿ ಲು ಕುರುಡುಮಲೆ ದೇವಸ್ಥಾನ ದಿಂದ ಉಭಯ ನಾಯಕರು ನಾಳೆ ಬೆಳಗ್ಗೆ ಕೋಲಾರ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಬೇಕಿತ್ತು, ಇದೇ ರೀತಿ ಶನಿವಾರ ಹಾಸನದ ಹೊಳೆನರಸೀಪುರದಿಂದ ಪ್ರಚಾರದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಪತ್ರಿಕಾ ಹೇಳಿಕೆ ನೀಡಿ, ಎರಡು ಲೋಕಸಭಾ ಚುನಾವಣಾ ಪ್ರಚಾರ (3ನೇ ಪುಟಕ್ಕೆ)

# ಪ್ರಚಾರಕ್ಕೆ ಬಿಜೆಪಿ ವರಿಷ್ಠರ ದಂಡು

### ಮೋದಿ, ಅಮಿತ್ ಷಾ, ಯೋಗಿ ಆದಿತ್ಯನಾಥ್ ಸೇರಿ ವರಿಷ್ಠರ ದಂಡು ರಾಜ್ಯಕ್ಕೆ

ಬೆಂಗಳೂರು, ಮಾ. 28- ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ, ಬಿಜೆಪಿಯ ವರಿಷ್ಠ ನಾಯಕರ ದಂಡೇ ಕರ್ನಾಟಕದಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಲಿದೆ.

ಬಿಜೆಪಿಯ ತಾರಾ ಪ್ರಚಾರಕರ ಪಟ್ಟಿಯಲ್ಲಿ ಪಕ್ಷದ ವರಿಷ್ಠ ನಾಯಕರಲ್ಲದೆ, ಜೆಡಿಎಸ್ ನಾಯಕ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಅವರೂ ಇದ್ದಾರೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಪೈಕಿ ಮೊದಲ ಹಂತದಲ್ಲಿ ಹಳೆ ಮೈಸೂರು ಭಾಗದ 14 ಕ್ಷೇತ್ರಗಳಿಗೆ ಏಪ್ರಿಲ್ 26 ರಂದು ಮತದಾನ ನಡೆಯಲಿದೆ.

ಈ ಕ್ಷೇತ್ರಗಳಿಗೆ ಸೀಮಿತವಾಗಿ ಪ್ರಧಾನಿ ಅವರು ಏಪ್ರಿಲ್ ಮೊದಲ ವಾರದಿಂದ ಪ್ರಚಾರ ಅಂತ್ಯದವರೆಗೂ ನಾಲ್ಕು ಬೃಹತ್ ಸಮಾವೇಶಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.



**ಕೇಂದ್ರ ಬಿಜೆಪಿ ಕಚೇರಿ ತಾತ್ಕಾಲಿಕ ವೇಳಾಪಟ್ಟಿಯಂತೆ ಪ್ರಧಾನಿ ಅವರು, ಮೈಸೂರು, ಬೆಂಗಳೂರು ಗ್ರಾಮಾಂತರ ಹಾಗೂ ಹಾಸನದಲ್ಲೂ ಸಾರ್ವಜನಿಕ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ. ಚಿಕ್ಕಬಳ್ಳಾಪುರ ಇಲ್ಲವೇ ದಕ್ಷಿಣ ಕನ್ನಡದಲ್ಲಿ ಮತ್ತೊಂದು ಸಮಾವೇಶ ಉದ್ದೇಶಿಸಿ ಅವರು ಭಾಷಣ ಮಾಡುವ ನಿರೀಕ್ಷೆ ಇದೆ.**

ಪ್ರಚಾರ ಸಂದರ್ಭದಲ್ಲಿ ಬೆಂಗಳೂರು ನಗರ ವ್ಯಾಪ್ತಿಗೆ ಬರುವ ಎಲ್ಲಾ ಕ್ಷೇತ್ರಗಳು ಒಳಗೊಂಡಿರುತ್ತದೆ.

ಇನ್ನು ಹಾಸನದ ಸಮಾವೇಶ ಉಡುಪಿ-ಚಿಕ್ಕಮಗಳೂರು ಹಾಗೂ ತುಮಕೂರು ಕ್ಷೇತ್ರಗಳನ್ನು ಒಳಗೊಂಡಿರುತ್ತದೆ.

ಪ್ರಧಾನಿ ಭಾಷಣ ಸಂದರ್ಭದಲ್ಲಿ ಒಂದು ಇಲ್ಲವೇ, ಎರಡು ಕಡೆ ಮಾತ್ರ ದೇವೇಗೌಡರು ವೇದಿಕೆ ಹಂಚಿಕೊಳ್ಳಲಿದ್ದಾರೆ. ಇನ್ನುಳಿದ ಎಲ್ಲಾ ಪ್ರಚಾರ ವೇದಿಕೆಯಲ್ಲಿ ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಭಾಗಿಯಾಗಲಿದ್ದಾರೆ. ವೇದಿಕೆಯಲ್ಲಿ ಸುತ್ತಮುತ್ತಲಿನ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಇರಲಿದ್ದಾರೆ.

ಪ್ರಧಾನಿ ಅವರಲ್ಲದೆ, ಬಿಜೆಪಿಯ ಮುಖಂಡರು ಹಾಗೂ ಕೇಂದ್ರ ಸಚಿವರಲ್ಲಿ ಯಾರಾದರು ಒಬ್ಬರು ದಿನನಿತ್ಯ ಮೊದಲ ಹಂತದಲ್ಲಿ (4ನೇ ಪುಟಕ್ಕೆ)

## ನ್ಯಾಯಾಂಗದ ಮೇಲೆ ಒತ್ತಡಕ್ಕೆ ಯತ್ನ

### ಸಿ.ಜೆ.ಐ.ಗೆ ವಕೀಲರ ಪತ್ರ

ನವದೆಹಲಿ, ಮಾ. 28 – ಸ್ವಹಿತಾಸಕ್ತರ ಗುಂಪು ನ್ಯಾಯಾಂಗದ ಮೇಲೆ ಒತ್ತಡ ಹೇರಲು ಹಾಗೂ ನ್ಯಾಯಾಲಯಗಳ ತೇಜೋವಧೆ ಮಾಡಲು ಪ್ರಯತ್ನ ನಡೆಸಿದೆ ಎಂದು 600ಕ್ಕೂ ಹೆಚ್ಚು ವಕೀಲರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದಿದ್ದಾರೆ.

ಹಿರಿಯ ವಕೀಲ ಹರೀಶ್ ಸಾಳ್ವೆ, ಬಾರ್ ಕೌನ್ಸಿಲ್ ಅಧ್ಯಕ್ಷ ಮೆನನ್ ಕುಮಾರ್ ಮಿಶ್ರ ಸೇರಿದಂತೆ 600ಕ್ಕೂ ಹೆಚ್ಚು ವಕೀಲರು ಪತ್ರ ಬರೆದಿದ್ದಾರೆ.

ವಿಶೇಷವಾಗಿ ರಾಜಕಾರಣಿಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಂಗದ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಸಲಾಗುತ್ತಿದೆ. ಇದರಿಂದ ನ್ಯಾಯಾಲಯಗಳಿಗೆ ಧಕ್ಕೆಯಾಗುತ್ತಿದೆ ಹಾಗೂ ಪ್ರಜಾಪ್ರಭುತ್ವಕ್ಕೆ ಬೆದರಿಕೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ. ವೈ.ಚಂದ್ರಚೂಡ್ ಅವರಿಗೆ ಪತ್ರ ಬರೆಯಲಾಗಿದೆ.

ವಕೀಲರ ಒಂದು ಗುಂಪು ಹಗಲಿನಲ್ಲಿ ರಾಜಕಾರಣಿಗಳನ್ನು ಸಮರ್ಥಿಸಿಕೊಳ್ಳುತ್ತದೆ. ನಂತರ ರಾತ್ರಿ ಮಾಧ್ಯಮಗಳ ಮೂಲಕ ನ್ಯಾಯಮೂರ್ತಿಗಳ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದೆ ಎಂದು ಪತ್ರದಲ್ಲಿ ದೂರಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಬೊಬ್ಬೆ ಹಾಕುವುದು ಹಾಗೂ ಬೆದರಿಸುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿಯಾಗಿದೆ. ಐದು ದಶಕಗಳ ಹಿಂದೆಯೇ ಅವರು ಬದ್ಧತೆಯುಳ್ಳ ನ್ಯಾಯಾಂಗಕ್ಕೆ ಕರೆ ನೀಡಿದ್ದರು. ಈಗ ತಮ್ಮ ಸ್ವಾರ್ಥಕ್ಕಾಗಿ ಇತರರಿಂದ ಬದ್ಧತೆ ಕೇಳುತ್ತಿದ್ದಾರೆ ಎಂದಿದ್ದಾರೆ. ಈ ಬಗ್ಗೆ ತಿರುಗೇಟು ನೀಡಿರುವ ಕಾಂಗ್ರೆಸ್, ಪ್ರಧಾನಿ ಮೋದಿ ಅವರು ಮಿಥ್ಯಾಚಾರಿಯಾಗಿದ್ದಾರೆ ಹಾಗೂ ಪ್ರಜಾಪ್ರಭುತ್ವ ತಿರುಚುತ್ತಿದ್ದಾರೆ ಎಂದು ಆರೋಪಿಸಿದೆ.

ಪ್ರಧಾನಿ ಮೋದಿ ಅವರು ಪ್ರತಿಯೊಂದು ಸಂಸ್ಥೆಯನ್ನು ದಮನಿಸುವ ಯತ್ನದಲ್ಲಿದ್ದಾರೆ. ಸುಪ್ರೀಂ ಕೋರ್ಟ್‌ನ ನಾಲ್ಕು ಹಿರಿಯ ನ್ಯಾಯಮೂರ್ತಿಗಳು ಅಭೂತಪೂರ್ವ ಪತ್ರಿಕಾಗೋಷ್ಠಿ ನಡೆಸಿದ್ದನ್ನು ಅವರು ಮರೆತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

## ಅಕ್ರಮ ಹಣ : ಎಎಪಿ ಗೋವಾ ಅಧ್ಯಕ್ಷ ಪಾಲೇಕರ್ ವಿಚಾರಣೆ



ಪಣಜಿ, ಮಾ. 28 - ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಾರ್ಟಿ ಗೋವಾ ಘಟಕದ ಅಧ್ಯಕ್ಷ ಅಮಿತ್ ಪಾಲೇಕರ್ ಹಾಗೂ ಇತರೆ ಮೂವರನ್ನು ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಿದೆ.

ಅಕ್ರಮ ಹಣ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಜಾರಿ ನಿರ್ದೇಶನಾಲಯ, ಪಾಲೇಕರ್, ಆಮ್ ಆದ್ಮಿ ಪಾರ್ಟಿ ಮುಖಂಡ ರಾಮರಾವ್ ವಾಘ್ ಹಾಗೂ ಇತರೆ ಇಬ್ಬರಾದ ದತ್ತಪ್ರಸಾದ್ ನಾಯಕ್ ಹಾಗೂ ಅಶೋಕ್ ನಾಯಕ್ ಅವರನ್ನು ವಿಚಾರಣೆಗೆ ಒಳಪಡಿಸಿದೆ.

## ಭದ್ರತಾ ಕೊಠಡಿ ಪರಿಶೀಲಿಸಿದ ಜಿಲ್ಲಾ ಚುನಾವಣಾಧಿಕಾರಿ



ದಾವಣಗೆರೆ, ಮಾ.28- ಲೋಕಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಕೆ ಏಪ್ರಿಲ್ 12 ರಿಂದ ಆರಂಭವಾಗಲಿದ್ದು, ವಿಧಾನಸಭಾ ಕ್ಷೇತ್ರದಲ್ಲಿನ ಸಹಾಯಕ ಚುನಾವಣಾಧಿಕಾರಿಗಳ ಕಚೇರಿಯಲ್ಲಿನ ವಾರ್ ರೂಂ ಪರಿಶೀಲನೆಯನ್ನು ಗುರುವಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ನಡೆಸಿದರು.

ಮಾಯಕೊಂಡ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಸ್ಥಾಪಿಸಲಾದ ವಾರ್ ರೂಂ ಪರಿಶೀಲನೆ ನಡೆಸಲಾಯಿತು. ವಾರ್ ರೂಂನಲ್ಲಿ ಸಾರ್ವಜನಿಕರಿಗೆ ಸಹಾಯಕ್ಕಾಗಿ ಸ್ಥಾಪಿಸಲಾಗಿರುವ ಸಂಪರ್ಕ ವಿಧಾನ, ದೂರು ಸ್ವೀಕರಿಸಿ ನಿರ್ವಹಣೆ ಮಾಡುವ ವ್ಯವಸ್ಥೆ, ಮತಯಂತ್ರಗಳನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಿಕೊಳ್ಳಲಾದ ಭದ್ರತಾ ಕೊಠಡಿ, ಗೈರು ಮತದಾರರ ಪಟ್ಟಿ ಸಿದ್ದಪಡಿಸುವ ಬಗ್ಗೆ ಪರಿಶೀಲನೆ ನಡೆಸಿದರು.

**ಹೊನ್ನಾಳಿಗೆ ಭೇಟಿ:** ಹೊನ್ನಾಳಿ ಸಹಾಯಕ ಚುನಾವಣಾಧಿಕಾರಗಳ ಕಚೇರಿಗೆ ಭೇಟಿ ನೀಡಿ ಅಲ್ಲಿ ಮತಯಂತ್ರಗಳನ್ನು ಸಂಗ್ರಹಿಸಲು ಸ್ಥಾಪಿಸಲಾದ ಸ್ಟ್ರಾಂಗ್ ರೂಂ ಪರಿಶೀಲನೆ ನಡೆಸಿದರು.

**ಚೆಕ್‌ಪೋಸ್ಟ್ ಪರಿಶೀಲನೆ:** ಹೊನ್ನಾಳಿ ತಾಲ್ಲೂಕು (3ನೇ ಪುಟಕ್ಕೆ)

## ಖಾತ್ರಿ ಕೂಲಿ ಶೇ.10ರಷ್ಟು ಹೆಚ್ಚಳ

ನವದೆಹಲಿ, ಮಾ. 28 - ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಕೂಲಿ ದರವನ್ನು ಪರಿಷ್ಕರಿಸಿದ್ದು, ರಾಜ್ಯದ ಕೂಲಿಯನ್ನು ಶೇ.10ರಷ್ಟು ಹೆಚ್ಚಿಸಲಾಗಿದೆ.

ರಾಜ್ಯದಲ್ಲಿ 316ರೂ. ಇದ್ದ ನರೇಗಾ ಕೂಲಿಯನ್ನು 349 ರೂ.ಗಳಿಗೆ ಏರಿಕೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಶತಾಯುಷಿ ಮದನವಳಮ್ಮ ನಿಧನ



ದಾವಣಗೆರೆ #5468, 7ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ ವಾಸಿ ದಿ. ಎಸ್.ಬಿ. ನಾಭಿರಾಜಯ್ಯ ಇವರ ಧರ್ಮಪತ್ನಿ

**ಮದನವಳಮ್ಮ**

ಇವರು ದಿನಾಂಕ 28.03.2024ರ ಗುರುವಾರ ಬೆಳಗ್ಗೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 100 ವರ್ಷಗಳಾಗಿದ್ದವು.


ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.03.2024ರ ಗುರುವಾರ ಸಂಜೆ 4.30ಕ್ಕೆ ನಗರದ ಗ್ಲಾಸ್ ಹೌಸ್ ಹಿಂಭಾಗದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**: ದುಃಖತಪ್ತರು :**

**ಬಿ.ಎನ್. ಅಶೋಕ ಕುಮಾರ್, ಡಾ. ಬಿ.ಎನ್. ಧನ್ಯ ಕುಮಾರ್ ಮತ್ತು C.A ಬಿ.ಎನ್. ವಿಜಯಕುಮಾರ್**

**ಮೊ : +91 94480 58554**


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28-03-2024ರಂದು ನಿಧನರಾದ
ರೂಬಿ ಸ್ಟೋನ್ ಕ್ರಷರ್ ಮಾಲೀಕರೂ, ನಮ್ಮ ಮಾರ್ಗದರ್ಶಕರೂ ಆದ

**ಶ್ರೀ ಎ.ಎಂ. ಮಾಳಗಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ
ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಸಿಬ್ಬಂದಿ ವರ್ಗದವರು**

**ಶಿವಗಂಗಾ ಸ್ಟೋನ್ ಕ್ರಷರ್**

# ಸಿದ್ಧಾರೂಢರ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಿಲ್ಲ

## ಯಲವಟ್ಟಿ : ಬ್ರಹ್ಮಲೀನ ಸದ್ಗುರುಗಳ ಪುಣ್ಯಾರಾಧನೆಯಲ್ಲಿ ಸೋಮಶೇಖರ ಶ್ರೀಗಳು



ಮಲೇಬೆನ್ನೂರು, ಮಾ.28- ಈ ನಾಡಿನಲ್ಲಿ ಸದ್ಗುರು ಸಿದ್ಧಾರೂಢರ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಿಲ್ಲ. ಅಂತಹ ಶ್ರೇಷ್ಠವಾದ ಪರಂಪರೆ ಸದಾಕಾಲ ಉಳಿಯುವಂತೆ ಮಾಡಿದ್ದಾರೆ ಎಂದು ಹಳೇಬೀಡಿನ ಪುಷ್ಪಗಿರಿ ಮಹಾಸಂಸ್ಥಾನದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಗುರುವಾರ ಸಂಜೆ ಯಲವಟ್ಟಿ ಗ್ರಾಮದ ಶ್ರೀ ಗುರುಸಿದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಮಹಾಸ್ವಾಮೀಜಿ ಮತ್ತು ಶ್ರೀ ನಿತ್ಯಾನಂದ ಮಹಾಸ್ವಾಮೀಜಿ ಅವರ ಪುಣ್ಯಾರಾಧನೆ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಿದ್ಧಾರೂಢರ ಪರಂಪರೆಯಲ್ಲಿ ಸತ್ಯದ ಮಾರ್ಗದರ್ಶನ ಆಗುವುದರ ಜೊತೆಗೆ ಭಕ್ತಿ-ಶ್ರದ್ಧೆ-ನಂಬಿಕೆಗಳ ಮಹತ್ವವನ್ನು ಎತ್ತಿ ತೋರಿಸಿದ್ದಾರೆ. ಲೌಕಿಕ ಸಂಪತ್ತು ಕ್ಷಣಿಕವಾದದ್ದು. ಆದರೆ, ಅಧ್ಯಾತ್ಮಿಕ ಸಂಪತ್ತು ಸದಾಕಾಲ ಉಳಿಯುವಂತದ್ದು. ಅಂತಹ ಅಧ್ಯಾತ್ಮಿಕ ಸಂಪತ್ತನ್ನು ಸಿದ್ಧಾರೂಢರು ಈ ನಾಡಿನ ಜನರಿಗೆ ಕೊಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ನಾವು ಆತ್ಮಜ್ಞಾನಕ್ಕಿಂತ ದೊಡ್ಡ ಸಂಪತ್ತು ಈ ಜಗತ್ತಿನಲ್ಲಿ ಯಾವುದೂ ಇಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

ಪೋಷಕರು ಮಕ್ಕಳಲ್ಲಿ ದುಡ್ಡಿನ ವ್ಯಾಮೋಹವನ್ನು ಬೆಳೆಸುತ್ತಿದ್ದಾರೆಯೇ ಹೊರತು, ಭಕ್ತಿ-ಭಾವ-ಶ್ರದ್ಧೆ-ಸಾಮಾಜಿಕ ಪ್ರಜ್ಞೆ ಬೆಳೆಸುತ್ತಿಲ್ಲ. ಅಷ್ಟೇ ಅಲ್ಲ, ಚಿಕ್ಕ ಮಕ್ಕಳನ್ನು ದೂರದ ನಗರಗಳಲ್ಲಿರುವ ಹಾಸ್ಟೆಲ್‌ಗಳಿಗೆ ಸೇರಿಸಿ, ಓದಿಸುತ್ತಿದ್ದಾರೆ. ಅವರಿಗೆ ತಂದೆ-ತಾಯಿಯ ಮಮತೆ ಮತ್ತು ಕಷ್ಟ-ಸುಖ ಗೊತ್ತಿಲ್ಲದೇ, ಮುಂದೆ ಅವರು ನಿಮ್ಮನ್ನು ವೃದ್ಧಾಶ್ರಮಗಳಿಗೆ ಸೇರಿಸುವಂತಾಗುತ್ತಾರೆ ಎಂದು ಪೋಷಕರನ್ನು ಎಚ್ಚರಿಸಿದರು.

ಹೋತನಹಳ್ಳಿಯ ಶ್ರೀ ಗುರುಸಿದ್ಧಾಶ್ರಮದ ಶ್ರೀ ಶಂಕರಾನಂದ ಸ್ವಾಮೀಜಿ ಮಾತನಾಡಿ, ಬ್ರಹ್ಮಲೀನ ಸದ್ಗುರು ಶ್ರೀ ಶಿವಾನಂದ ಶ್ರೀಗಳು 1962ರಲ್ಲಿ ಈ ಆಶ್ರಮ ಸ್ಥಾಪಿಸಿ, ಈ ಭಾಗದಲ್ಲಿ ಭಕ್ತರ ಮನಸ್ಸು ಕಟ್ಟುವ ಕೆಲಸ ಮಾಡಿದ್ದರ ಫಲವಾಗಿ, ಇವತ್ತು ಶ್ರೀ ಯೋಗಾನಂದ ಶ್ರೀಗಳು ನಾವೆಲ್ಲರೂ ಇಲ್ಲಿಗೆ ಆಗಮಿಸುವಂತೆ ಅವರ ಪುಣ್ಯಾರಾಧನೆ ಕಾರ್ಯಕ್ರಮ ಮಾಡಿ, ಭಕ್ತರಿಗೆ ಭಕ್ತಿಯ ಭಾವವನ್ನು ಹೆಚ್ಚಿಸಿದ್ದಾರೆ ಎಂದರು.

ದಿವ್ಯ ನೇತೃತ್ವ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಮಾತನಾಡಿ, ನಿಜವಾದ ಭಕ್ತಿ ಬದುಕನ್ನು ಪಾವನಗೊಳಿಸುವುದರ ಜೊತೆಗೆ ಬಂಧನ-ಕಷ್ಟ-ದುಃಖವನ್ನು ದೂರ ಮಾಡುತ್ತದೆ. ಅಂತಹ ಭಕ್ತಿ-ಶ್ರದ್ಧೆ-ವಿಶ್ವಾಸದಿಂದ ಬದುಕು ಸುಂದರವಾಗಲು ಸಾಧ್ಯವಾಗುತ್ತದೆ. ಅಂತಹ ಅಚಲವಾದ ಭಕ್ತಿಯನ್ನು ನೀವು ಸಿದ್ಧಾರೂಢರ ಪರಂಪರೆಯಲ್ಲಿ ಮಾತ್ರ ನೋಡಲು ಸಾಧ್ಯ ಎಂದರು.

ಬಸವಾಪಟ್ಟಣ ಸಿದ್ಧಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಹುಣಸಿಕಟ್ಟೆಯ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಕುಂಬಳೂರಿನ ಕೆ.ತೀರ್ಥಪ್ಪ, ಸಿರಿಗೆರೆಯ ಡಿ.ಸಿದ್ದೇಶ್, ಕುಂದೂರು ಮಂಜಪ್ಪ ಮಾತನಾಡಿದರು.

ಕುಂಬಳೂರು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್.ಶಿವರಾಮಚಂದ್ರಪ್ಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆಂಚಮ್ಮನಹಳ್ಳಿ ಸುರೇಶ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಂದಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷ ಎಂ.ವಿ.ನಾಗರಾಜ್, ಮಾಜಿ ಅಧ್ಯಕ್ಷರಾದ ಬಿ.ವೀರಯ್ಯ, ಜಿಗಳಿ ಇಂದೂಧರ್, ಬಿ.ಕೆ.ಮಹೇಶ್ವರಪ್ಪ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಜಿ.ಆಂಜನೇಯ, ಪುಷ್ಪಗಿರಿ ಗ್ರಾಮಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಅಡವಿ, ಹಿರಿಯರಾದ ಮುರುಗೆಪ್ಪ ಗೌಡ್ರು, ಬಸಪ್ಪ ಮೇಷ್ಟ್ರು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ವಾಸನದ ಜಯ್ಯಮ್ಮ ಮಲ್ಲಣ್ಣನವರ್ ಜಾನಪದ ಗೀತೆ ಮತ್ತು ಕುಂಬಳೂರಿನ ಕೆ. ಕುಬೇರಪ್ಪ ಭಕ್ತಿ ಗೀತೆ ಹಾಡಿದರು.

ಸಿರಿಗೆರೆಯ ಸಾಫ್ಟ್‌ವೇರ್ ಇಂಜಿನಿಯರ್ ವೆಂಕಟೇಶ್ ಗೌಡ ಪ್ರಾರ್ಥಿಸಿದರು. ಪಿಎಸಿಎಸ್ ಸಿಇಓ ಶೇಖರಪ್ಪ ನಿರೂಪಿಸಿದರು. ಪತ್ರಕರ್ತ ಜಿಗಳಿ ಪ್ರಕಾಶ್ ವಂದಿಸಿದರು.

# ಹರಿಹರ: ಏ.4ರಂದು ಶ್ರೀ ಕಾಶಿ ನೀಲಕಂಠೇಶ್ವರ ಸ್ವಾಮಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ





ಹರಿಹರ, ಮಾ.28- ನಗರದ ಮೆಟ್ಟಿಲು ಹೊಳೆ ರಸ್ತೆಯ ಕುರುಹಿನಶೆಟ್ಟಿ ಸಮಾಜದ ದೇವಸ್ಥಾನ ಆವರಣದಲ್ಲಿ ಶ್ರೀ ಕಾಶಿ ನೀಲಕಂಠೇಶ್ವರ ಸ್ವಾಮಿ ಹಾಗೂ ಗಣಪತಿ ನಂದಿ ದೇವರುಗಳ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭವು ಏಪ್ರಿಲ್ 4 ರಂದು, ಶ್ರೀ ಜಗದ್ಗುರು ನಾಲ್ವಡಿ ನೀಲಕಂಠ ಪಟ್ಟದಾರ್ಯ ಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿದೆ ಎಂದು ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ಬಸವರಾಜ್ ಇಂಡಿ ಮತ್ತು ಕಾರ್ಯದರ್ಶಿ ಚಂದ್ರಶೇಖರ್ ಅಮ್ರುದ್ ತಿಳಿಸಿದರು.

31 ರಂದು ದೇವರ ನೂತನ ಶಿಲಾ ಮೂರ್ತಿಗಳ ಮೆರವಣಿಗೆ ಶಿಬಾರ ವೃತ್ತದಿಂದ ಪ್ರಾರಂಭಗೊಂಡು ರಾಜಬೀದಿಗಳಲ್ಲಿ ಸಂಚರಿಸಿ ಪುನಃ ದೇವಸ್ಥಾನದ ಆವರಣದಲ್ಲಿ ಅಂತ್ಯಗೊಳ್ಳಲಿದೆ.

ದಿನಾಂಕ 3ರಂದು ಕೋಟೆ ಬಡಾವಣೆಯ ಶ್ರೀ ದತ್ತಾತ್ರೇಯ ಭಟ್ ನೇತೃತ್ವದಲ್ಲಿ ಬೆಳಗ್ಗೆ 8ರಿಂದ ಗಂಗಾನಯನ, ಗಣಪತಿ, ನವಗ್ರಹ ಪೂಜೆ, ಹೋಮ ಬಲಿಹರಣ ಪೂಜೆ ನಡೆಯುವುದು. ಮಹಿಳಾ ಮಂಡಳಿಯವರಿಂದ ಭಜನೆ, ಮಧ್ಯಾಹ್ನ 2 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ.

ದಿನಾಂಕ 4 ರಂದು ಶ್ರೀ ವಾರಣಾಸಿಯ ಕಾಶಿ ವಿಶ್ವನಾಥನ ಸನ್ನಿದಾನದಿಂದ ತರಿಸಲ್ಪಟ್ಟಿರುವ ನೂತನ ಶ್ರೀ ಕಾಶಿ ನೀಲಕಂಠೇಶ್ವರ, ನಂದಿ ಗಣಪತಿ ದೇವರುಗಳ ಪ್ರಾಣ ಪ್ರತಿಷ್ಠಾಪನೆ ಬೆಳಗ್ಗೆ 11-38 ರಿಂದ 12-29 ರವರಿಗೆ ನೇರವೇರಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

## ಜಾತ್ರೆ : ಇಂದು ಸಾಂಸ್ಕೃತಿಕ ಕಾರ್ಯಕ್ರಮ



ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ದೇವಸ್ಥಾನದ ಮುಂಭಾಗದಲ್ಲಿ ಇಂದಿನಿಂದ ಬರುವ ಏಪ್ರಿಲ್ 5ರವರೆಗೆ ಪ್ರತಿದಿನ ರಾತ್ರಿ 8 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ನಾಡಿನ ವಿವಿಧ ಭಾಗಗಳ ಪ್ರಸಿದ್ಧ ಕಲಾವಿದರ ತಂಡ ಈ ಕಾರ್ಯಕ್ರಮವನ್ನು ನಡೆಸಿಕೊಡಲಿದೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಡಾ. ಎಸ್. ಮೃತ್ಯುಂಜಯ (ಮಕ್ಕಳ ತಜ್ಞರು) ಅವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಟ್ರಸ್ಟ್ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

## ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಇಂದು ಗಾಯತ್ರಿ ಪರ ಎಸ್‌ಎಆರ್ ಪ್ರಚಾರ





ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಪರ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ನೇತೃತ್ವದಲ್ಲಿ ಇಂದು 9.30 ಕ್ಕೆ ಹಳೇಬಾತಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಲಾಗುವುದು.

ಸಂಸದ ಜಿ.ಎಂ.ಸಿದ್ದೇಶ್ವರ, ಗಾಯತ್ರಿ ಸಿದ್ದೇಶ್ವರ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ನಾಗರಾಜ್ ಲೋಕಿಕೆರೆ, ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸಂಗನಗೌಡ ಮತ್ತು ಬಿಜೆಪಿ ಮುಖಂಡರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳ್ ತಿಳಿಸಿದ್ದಾರೆ.

## ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಪ್ರಚಾರ

ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಇಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚಾರ ನಡೆಸಲಿದ್ದಾರೆ. ಬೆಳಿಗ್ಗೆ 9.30ಕ್ಕೆ ಹಳೇಬಾತಿ ಆಂಜನೇಯ ದೇವಸ್ಥಾನ, 9.45 ಕ್ಕೆ ಗುಡ್ಡದ ಕ್ಯಾಂಪ್, 10. ಕ್ಕೆ ನೀಲಾನಹಳ್ಳಿ, 10.15 ಕ್ಕೆ ದೊಡ್ಡಬಾತಿ, 10.30 ಕ್ಕೆ ಆವರಗೊಳ್ಳ, 10.45 ಕ್ಕೆ ಕಕ್ಕರಗೊಳ್ಳ, 11.00 ಕ್ಕೆ ಕೋಡಿಹಳ್ಳಿ, 11.15 ಕ್ಕೆ ಅರಸಾಪುರ, 11.30 ಕ್ಕೆ ಹೊಸಕಡ್ಲೇಬಾಳು, 11.45 ಕ್ಕೆ ಚಿಕ್ಕ ಓಬಜ್ಜಿಹಳ್ಳಿ, 12.00 ಕ್ಕೆ ದೊಡ್ಡ ಓಬಜ್ಜಿಹಳ್ಳಿ, 12.15 ಕ್ಕೆ ಮಾಗಾನಹಳ್ಳಿ ಕೋಡಿಕ್ಯಾಂಪ್, 12.30 ರಿಂದ ರಾತ್ರಿ 10 ರ ವರೆಗೆ ಅಮೃತನಗರ, ಹಳೇ ಕಡ್ಲೇಬಾಳು, ದೇವರಹಟ್ಟಿ, ಬೂದಾಳು, ಚಿತ್ತಾನಹಳ್ಳಿ, ಕಲಪನಹಳ್ಳಿ, ಬೇತೂರು, ಪುಟಗನಾಳ್, ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಮಲ್ಲಾಪುರ, ಲಿಂಗದಹಳ್ಳಿ ಗ್ರಾಮಗಳಲ್ಲಿ ಪ್ರಚಾರ ಕಾರ್ಯ ನಡೆಯಲಿದೆ.

## ಜೆಡಿಎಸ್ ಮಹಿಳಾ ಅಧ್ಯಕ್ಷರಾಗಿ ಗಾಯತ್ರಿ



ಹರಿಹರ, ಮಾ. 28- ದಾವಣಗೆರೆ ಜಿಲ್ಲಾ ಜೆಡಿಎಸ್ ಮಹಿಳಾ ಅಧ್ಯಕ್ಷರನ್ನಾಗಿ ಗಾಯತ್ರಿ ಹಾಲೇಶ್ ಅವರನ್ನು ಈ ಕೂಡಲೇ ಜಾರಿಗೆ ಬರುವಂತೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ ಆದೇಶ ಹೊರಡಿಸಿದರು. ಈ ಸಂದರ್ಭದಲ್ಲಿ ಎಚ್. ಆನಂದಪ್ಪ, ಬಾತಿ ಶಂಕರ್, ಧನಂಜಯ ಡಿ.ಆರ್, ದುಗ್ಗೇಶ್ ಕುಕ್ಕುವಾಡ ಜಗದೀಶ್ ಇನ್ನು ಮುಂತಾದವರು ಉಪಸ್ಥಿತರಿದ್ದರು.

## ಪಂಚಮಸಾಲಿ ಪೀಠಕ್ಕೆ ಪ್ರಭಾ ಮಲ್ಲಿಕಾರ್ಜುನ್ ಭೇಟಿ



ಹರಿಹರ, ಮಾ. 28 - ಲೋಕ ಸಭೆಯ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠಕ್ಕೆ ಭೇಟಿ ನೀಡಿ, ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರ ಆಶೀರ್ವಾದ ಪಡೆದರು. ಈ ಸಂಧರ್ಭದಲ್ಲಿ ನಂದಿಗಾವಿ ಶ್ರೀನಿವಾಸ್, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಜಯನಗರ ಜಿಲ್ಲಾಧ್ಯಕ್ಷ ಪ್ರಕಾಶ ಪಾಟೀಲರು, ವಕೀಲ ನಾಗೇಂದ್ರಪ್ಪ, ಹಾಲೇಶ ಹಾಗೂ ಇತರರು ಉಪಸ್ಥಿತರಿದ್ದರು.

## ತಮ್ಮನ್ನು ಭ್ರಷ್ಟ ಎಂದು ಘೋಷಿಸಲು ಅಬಕಾರಿ ಹಗರಣ ಹೆಣೆಯಲಾಗಿದೆ : ಕೇಜ್ರಿವಾಲ್

ನವದೆಹಲಿ ಮಾ. 28 – ಆಮ್ ಆದ್ಮಿ ಪಾರ್ಟಿ ಕುಸಿಯುವಂತೆ ಮಾಡಲು ಹಾಗೂ ತಮ್ಮನ್ನು ಭ್ರಷ್ಟ ಎಂದು ಘೋಷಿಸಲು ಅಬಕಾರಿ ಹಗರಣವನ್ನು ಹೆಣೆಯಲಾಗಿದೆ. ಈ ಹಗರಣ ದೆಹಲಿ ಸರ್ಕಾರದ ನೀತಿಯಿಂದ ಆರಂಭವಾಗಿಲ್ಲ. ಜಾರಿ ನಿರ್ದೇಶನಾಲಯ ತನಿಖೆ ನಡೆಸಿದ ನಂತರ ಆರಂಭವಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ. ಅಕ್ರಮ ಹಣ ಕುರಿತ ವಿಶೇಷ ನ್ಯಾಯಾಲಯದ ಎದುರು ಕೇಜ್ರಿವಾಲ್ ಈ ಆರೋಪ ಮಾಡಿದ್ದಾರೆ. ಆಮ್ ಆದ್ಮಿ ಪಾರ್ಟಿಯನ್ನು ಭ್ರಷ್ಟ ಎಂದು ಬಿಂಬಿಸಲು ಈ ರೀತಿಯ ಆರೋಪಗಳನ್ನು ಮಾಡಲಾಗುತ್ತಿದೆ ಎಂದವರು ಹೇಳಿದ್ದಾರೆ.

## ಕೊಕ್ಕನೂರು ದೇವಸ್ಥಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

ಮಲೇಬೆನ್ನೂರು, ಮಾ. 28 - ಸುಕ್ಷೇತ್ರ ಕೊಕ್ಕನೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಭಕ್ತರ ಅನುಕೂಲಕ್ಕಾಗಿ ಎಲ್‌ಐಸಿ ವತಿಯಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಯೋಗದಲ್ಲಿ ನೀಡಿದ ಶುದ್ಧ ಕುಡಿಯುವ ನೀರಿನ ಘಟಕವನ್ನು ಗುರುವಾರ ಎಲ್‌ಐಸಿ ಶಿವಮೊಗ್ಗ ವಿಭಾಗೀಯ ಕಛೇರಿಯ ಮೈಕ್ರೋ ವಿಭಾಗದ ವ್ಯವಸ್ಥಾಪಕ ಶ್ರೀನಿವಾಸ್ ಉದ್ಘಾಟಿಸಿದರು.

ನಂತರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀನಿವಾಸ್ ಅವರು ವಾಟರ್ ಫಿಲ್ಟರ್‌ಗಳನ್ನು ಕೊಕ್ಕನೂರು ಸೇರಿದಂತೆ 10 ಬೇರೆ ಬೇರೆ ಸ್ಥಳಗಳಿಗೆ ನೀಡಿದ್ದೇವೆ ಎಂದರು. ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ ಮಾತನಾಡಿದರು.

ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರಾದ ಜಿ. ಮಂಜುನಾಥ್ ಪಟೇಲ್, ಜಿಗಳಿ ಪ್ರಕಾಶ್, ಹನುಮಂತರಾಯ, ಧರ್ಮಸ್ಥಳ ಯೋಜನೆಯ ಯೋಜನಾಧಿಕಾರಿ ವಸಂತ್ ದೇವಾಡಿಗ, ಆಂಜನೇಯ ದೇವಸ್ಥಾನ ಕಮಿಟಿ ಅಧ್ಯಕ್ಷ ಅಭಿ ಪಾಟೀಲ್, ಖಜಾಂಚಿ ಜಿ.ಡಿ. ರಮೇಶ್, ನಿರ್ದೇಶಕ ಕೆ. ಹನುಮೇಶ್, ಕಂಪ್ಲಿ ಸಂಪನ್ಮೂಲ ವ್ಯಕ್ತಿ ನಿರಂಜನ್ ಪಾಟೀಲ್ ಸದಾನಂದ್, ವಲಯ ಮೇಲ್ವಿಚಾರಕಿ ರಂಜಿತಾ ಮತ್ತು ಇತರರು ಭಾಗವಹಿಸಿದ್ದರು.



## ಬೆಂಗಳೂರು ಸ್ಫೋಟ : ಪ್ರಮುಖ ಸಂಚುಕೋರನ ಬಂಧನ

ನವದೆಹಲಿ, ಮಾ. 28 – ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಸಂಚುಕೋರನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಬಂಧಿಸಿದೆ.

ಮುಜಾಮ್ಮಿಲ್ ಶರೀಫ್ ಎಂಬಾತನನ್ನು ಬುಧವಾರ ವಶಕ್ಕೆ ತೆಗೆದುಕೊಳ್ಳಲಾಗಿದೆ. ದೇಶದ ವಿವಿಧೆಡೆಯ 18 ತಾಣಗಳಲ್ಲಿ ಶೋಧ ನಡೆಸಿದ ನಂತರ ಆರೋಪಿಯನ್ನು ಬಂಧಿಸಲಾಗಿದೆ. ಪ್ರಕರಣದ ಇತರೆ ಇಬ್ಬರು ಆರೋಪಿಗಳಾದ ಮುಸಾವೀರ್ ಶಾಜೀಬ್ ಹುಸೇನ್ ಹಾಗೂ ಅಬ್ದುಲ್ ಮತೀನ್ ತಹ ಇನ್ನೂ ತಲೆಮರೆಸಿಕೊಂಡಿದ್ದಾರೆ.

## ಹಿರೇಹಾಲಿವಾಣದ ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷೇಧಕ್ಕೆ ಆಗ್ರಹ

ದಾವಣಗೆರೆ, ಮಾ. 28- ಹರಿಹರ ತಾಲ್ಲೂಕಿನ ಹಿರೇಹಾಲಿ ವಾಣದಲ್ಲಿ ಏ.1ರಿಂದ ಶ್ರೀ ಏಳೂರು ಕರಿಯಮ್ಮ ದೇವಿಯ ಜಾತ್ರೆ ನಡೆಸಲು ಕೆಲವರು ಮುಂದಾಗಿದ್ದು, ಜಾತ್ರೆ ವೇಳೆ ಪ್ರಾಣಿ ಬಲಿ ನಡೆಸುವುದಾಗಿಯೂ ಹೇಳಿದ್ದಾರೆ. ಪೊಲೀಸ್ ಇಲಾಖೆಯು ಪ್ರಾಣಿ ಬಲಿಯನ್ನು ತಡೆಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಗ್ರಾಮದ ಮುಖಂಡರು, ಏಳೂರು ಕರಿಯಮ್ಮ ದೇವಿ ದೇವಸ್ಥಾನ ಜಾತ್ರಾ ಸಮಿತಿ ಅಧ್ಯಕ್ಷರೂ ಆಗಿರುವ ಜಿ.ಕೆ. ಮಲ್ಲೇಶಪ್ಪ ಮಾತನಾಡಿ, ನಮ್ಮ ಸಮಿತಿಯು ಮಾ.18ರಿಂದ 22ರ ವರೆಗೆ ಯಾವುದೇ ಪ್ರಾಣಿ ಬಲಿ ನೀಡದೆ ದೇವಿಯ ಜಾತ್ರೆ ಆಚರಿಸಿತ್ತು. ಆದರೆ, ಈಗ ಇನ್ನೊಂದು ಸಮಿತಿಯವರು ಕೋಣ ಬಲಿಯೊಂದಿಗೆ ಏ.1ರಿಂದ ಜಾತ್ರೆ ನಡೆಸಲು ಸಿದ್ಧತೆ ನಡೆಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆಸ್ಪದ ನೀಡಬಾರದು ಎಂದು ಮನವಿ ಮಾಡಿದರು.

ನಾವು ಜಾತ್ರೆ ಆಚರಿಸುವಾಗ ಹರಿಹರ ಹಾಗೂ ಮಲೇಬೆನ್ನೂರು ಪೊಲೀಸರು ಸಿರಿಂಜ್‌ನಲ್ಲಿಯೂ ಕೋಣದ ರಕ್ತ ತೆಗೆಯಲು ಅವಕಾಶ ನೀಡಿರಲಿಲ್ಲ. ಈಗ ದೇವಸ್ಥಾನದ ಆವರಣದಲ್ಲಿಯೇ ಕೋಣ ಬಲಿ ನೀಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗ್ರಾಮಸ್ಥರಾದ ಟಿ. ತಿಪ್ಪೇಶ, ಡಿ. ಸಂತೋಷ್‌ಕುಮಾರ್, ಟಿ. ಸೋಮಪ್ಪ, ಎಂ.ಟಿ. ತಿಪ್ಪೇಶಪ್ಪ, ಹಳ್ಳೂರು ಚಂದ್ರಪ್ಪ ಮತ್ತಿತರರಿದ್ದರು.

# ಆಧುನಿಕ ದೃಶ್ಯ ಮಾಧ್ಯಮದ ಹಾವಳಿಗೆ ರಂಗಭೂಮಿ ಕ್ಷೀಣ

## ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ರಂಗ ಕಲಾವಿದ ಬಿ.ಇ. ತಿಪ್ಪೇಸ್ವಾಮಿ




ದಾವಣಗೆರೆ, ಮಾ.28- ಟಿ.ವಿ., ಮೊಬೈಲ್, ಸಾಮಾಜಿಕ ಜಾಲತಾಣ ಸೇರಿದಂತೆ ಆಧುನಿಕ ದೃಶ್ಯ ಮಾಧ್ಯಮಗಳ ಹಾವಳಿಯಿಂದಾಗಿ ರಂಗಭೂಮಿ ಕ್ಷೀಣಿಸುತ್ತಿದೆ. ಒಂದು ಕಾಲದಲ್ಲಿ ಕರ್ನಾಟಕ ಕಲಾವಿದರ ಮತ್ತು ರಂಗಕಲೆಯ ತವರು ಮನೆಯಾಗಿತ್ತು ಎಂದು ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ರಂಗ ಕಲಾವಿದ ಬಿ.ಇ. ತಿಪ್ಪೇಸ್ವಾಮಿ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಂಗಭೂಮಿಗೆ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟ ನೂರಾರು ಕಲಾವಿದರು ರಾಜ್ಯದಲ್ಲಿದ್ದಾರೆ. ಸುಮಾರು 68 ಹವ್ಯಾಸಿ ನಾಟಕ ಕಂಪನಿಗಳಿದ್ದವು. ಆದರೆ ಈಗ ಕೇವಲ 17 ಕಂಪನಿಗಳು ಮಾತ್ರ ಉಳಿದುಕೊಂಡಿವೆ. ರಂಗಭೂಮಿ ಮತ್ತು ನಾಟಕ ಪ್ರದರ್ಶನಗಳು ಕ್ರಮೇಣ ಕ್ಷೀಣಿಸುತ್ತಿವೆ. ರಂಗ ಕಲಾವಿದರ ಬದುಕು ಸಂಕಷ್ಟದಲ್ಲಿದೆ ಎಂದರು.

ಕರ್ನಾಟಕ ಸರ್ಕಾರ ನೀಡುತ್ತಿರುವ ರಂಗಭೂಮಿ ಹಿರಿಯ ಕಲಾವಿದರ ಪಿಂಚಣಿಯನ್ನು ಮಾಸಿಕ ಎರಡು ಸಾವಿರ ರೂ.ಗಳಿಂದ ಐದು ಸಾವಿರ ರೂ.ಗಳಿಗೆ ಹೆಚ್ಚಳ ಮಾಡಲು ಸಂಘಟಿತ ಹೋರಾಟದ ಅವಶ್ಯವಿದೆ ಎಂದು ಹೇಳಿದರು.

ಈಗ ನೀಡುತ್ತಿರುವ ಎರಡು ಸಾವಿರ ಪಿಂಚಣಿ ಯಾತಕ್ಕೂ ಸಾಲದು. ಕನಿಷ್ಠ ಐದು ಸಾವಿರ ರೂ. ನೀಡಿದರೆ ಬದುಕಿನ ಬಂಡಿ ತಕ್ಕ ಮಟ್ಟಿಗೆ ಸಾಗಲು ಸಾಧ್ಯವಿದೆ ಎಂದರು.

ಮೊದಲು ಕಲಾವಿದರು ಸಂಘಟಿತರಾಗಿ ಕಲಾವಿದರ ಶ್ರೇಯಸ್ಸಿಗಾಗಿ ದುಡಿಯುತ್ತಿರುವ ಸಂಘಟಕ ಎನ್.ಎಸ್. ರಾಜು ನೇತೃತ್ವದಲ್ಲಿ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ ಮನವಿ ಸಲ್ಲಿಸಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಮನುಷ್ಯನನ್ನು ತಿದ್ದಿ ತೀಡಿ ಜ್ಞಾನ ದಾಸೋಹದ ಮೂಲಕ ಸರಿದಾರಿಗೆ ತರುವ ಶಕ್ತಿ ರಂಗಭೂಮಿಗೆ ಇದೆ. ಇಂತಹ ರಂಗಕಲೆಯನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಪರಿಚಯಿಸಬೇಕಾದ ಜವಾಬ್ದಾರಿ ಇಂದಿನ ಯುವ ಸಮೂಹಕ್ಕಿದೆ ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿರಿಯ ಸಾಹಿತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ಮಾತನಾಡಿ, ರಂಗ ಕಲಾವಿದರು, ರಂಗಾಸಕ್ತರಿಗೆ ಸ್ಮರಣೀಯ ದಿನವಾದ ಇಂದು ವಿಶ್ವ ರಂಗಭೂಮಿ ದಿನವನ್ನು ಆಚರಿಸುತ್ತಿರುವುದು ಅತ್ಯಂತ ಸಂತಸದ ವಿಚಾರ ಎಂದು ಹೇಳಿದರು.

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಅಧ್ಯಕ್ಷ ಎನ್.ಎಸ್. ರಾಜು ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ 31 ವರ್ಷಗಳಿಂದ ನಮ್ಮ ಸ್ಫೂರ್ತಿ ಸಂಸ್ಥೆಯು ಯಾವುದೇ ಸ್ವಂತ ಅನುದಾನವಿಲ್ಲದೇ ದಾನಿಗಳು, ರಂಗಾಸಕ್ತರ ನೆರವಿನಿಂದ ಅನೇಕ ಸಮಾಜ ಸೇವಾ ಕಾರ್ಯಗಳನ್ನು ಮತ್ತು ರಂಗ ಚಟುವಟಿಕೆಗಳನ್ನು ಮಾಡುತ್ತಾ ಬರುತ್ತಿದೆ. ಸಂಗೀತ, ಸಾಹಿತ್ಯ, ಸಾಂಸ್ಕೃತಿಕ ಸೇವೆಗಾಗಿ ಸಂಸ್ಥೆ ಮೀಸಲಾಗಿದೆ. ಕಲೆ ಮತ್ತು ಕಲಾವಿದರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ ಎಂದರು.

ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರೂ, ರಂಗಕರ್ಮಿಗಳೂ ಆದ ಬಸವರಾಜ ಐರಣಿ ಅವರು ವಿಶ್ವ ರಂಗಭೂಮಿ ಕುರಿತು ಉಪನ್ಯಾಸ ನೀಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದಾವಣಗೆರೆ ನಗರ ಘಟಕದ ಗೌರವಾಧ್ಯಕ್ಷ ಎಂ.ಎಸ್. ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದಾವಣಗೆರೆ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ, ಮಾನವ ಮಹಿಳಾ ಹಕ್ಕುಗಳ ಅಧ್ಯಕ್ಷೆ ಡಿ.ಎಂ. ಕಲ್ಪನರಾಜ್, ಸಾಹಿತಿ ಡಾ.ಎ. ಶಿವನಗೌಡ, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಲಾವಿದ ಪಿ.ಜಿ.ಪರಮೇಶ್ವರಪ್ಪ ಮತ್ತಿತರರಿದ್ದರು.

॥ ಶ್ರೀ ಬನಶಂಕರಿ ದೇವಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ
ಶ್ರೀ ಡಾ॥ ಶಿವಶಂಕರ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18-03-2024ನೇ ಸೋಮವಾರ ರಾತ್ರಿ 11-55ಕ್ಕೆ
ನನ್ನ ಪೂಜ್ಯ ಅಣ್ಣನವರಾದ



ಜನನ : 19-01-1939
ನಿಧನ : 18-03-2024

**ಶ್ರೀ ಬಸವರಾಜ್ ಜಿ. (ಚಿರಡೋಣಿ)**
ನಿವೃತ್ತ ಅಧೀಕ್ಷಕರು
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 29-03-2024ನೇ ಶುಕ್ರವಾರ ಬೆಳಿಗ್ಗೆ 10-30ಕ್ಕೆ ಡಾ॥ ಸದ್ಯೋಜಾತ ಸ್ವಾಮಿ ಹಿರೇಮಠ, ಶಿವಾಚಾರ್ಯ ನಿಕೇತನ, ಎಂ.ಸಿ.ಸಿ.'ಬಿ'ಬ್ಲಾಕ್, ವಾಟರ್ ಟ್ಯಾಂಕ್ ಪಕ್ಕ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು :
ಶ್ರೀ ಡಾ॥ ಶಿವಶಂಕರ ಮತ್ತು ಸಹೋದರ, ಸಹೋದರಿಯರು ಮತ್ತು ಮೃತರ ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ಚಿರಡೋಣಿ ಶಂಕ್ರಪ್ಪಜ್ಜರ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 99642 28746

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


**ಎಸ್.ಕೆ. ಜಯರುದ್ರಪ್ಪ ನಿಧನ**



ದಾವಣಗೆರೆ ಎಂ.ಸಿ. ಕಾಲೋನಿ, 'ಬಿ' ಬ್ಲಾಕ್ ನಿವಾಸಿ
**ಶ್ರೀ ಬಿಳಿಚೋಡು ಶೆಟ್ರು ಎಸ್.ಕೆ. ಜಯರುದ್ರಪ್ಪ**
ಮಾಲೀಕರು, 'ಜಯವೀರ್' ಇಂಜಿನಿಯರಿಂಗ್ ಇಂಡಸ್ಟ್ರೀಸ್
(88 ವರ್ಷ) ಗುರುವಾರ ಮಾರ್ಚ್ 28ರ ಮಧ್ಯಾಹ್ನ 2.50ಕ್ಕೆ ಲಿಂಗೈಕ್ಯರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು-ಸೊಸೆಯಂದಿರು, ಓರ್ವ ಪುತ್ರಿ-ಅಳಿಯ, ಮೊಮ್ಮಕ್ಕಳು, ಮರಿ ಮೊಮ್ಮಗಳು, ನಾಲ್ಕು ಜನ ಸಹೋದರರು, ಮೂರು ಜನ ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ದೇಹವನ್ನು ಅಂತಿಮ ದರ್ಶನಕ್ಕಾಗಿ ಎಂ.ಸಿ. ಕಾಲೋನಿ, 8ನೇ ಮುಖ್ಯರಸ್ತೆ, 5ನೇ ಕ್ರಾಸ್ ನಲ್ಲಿರುವ ಸ್ವಗೃಹ # 3002, 'ಜಯಶಾಂತ' ನಿಲಯದಲ್ಲಿ ಶುಕ್ರವಾರ 29ರ ಬೆಳಿಗ್ಗೆ 09.00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಇಡಲಾಗುವುದು. ನಂತರ ಅವರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 3.30ಕ್ಕೆ ಅವರ ಸ್ವಗ್ರಾಮ ಬಿಳಿಚೋಡಿನಲ್ಲಿರುವ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಅವರ ಸಹೋದರ ಎಸ್.ಕೆ. ವೀರಣ್ಣನವರು ತಿಳಿಸಿದ್ದಾರೆ.

**ಇಂತಿ ದುಃಖತಪ್ತ ಕುಟುಂಬ ವರ್ಗ**
ಫೋನ್ : +91 9448114075, +91 9880620002

**ನಾಗನೂರು ಕೆಇಬಿ ಬಸವರಾಜ್ ನಿಧನ**



ದಾವಣಗೆರೆ ತಾಲ್ಲೂಕು ನಾಗನೂರು ವಾಸಿ ದಿ. ಜರೇಕಟ್ಟೆ ಹನುಮಂತಪ್ಪನವರ ಕೊನೆಯ ಪುತ್ರ ಕೆಇಬಿ ಬಸವರಾಜ್ (42) ಅವರು ದಿನಾಂಕ 28.03.2024 ರ ಗುರುವಾರ ರಾತ್ರಿ 10.30ಕ್ಕೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.03.2024ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ನಾಗನೂರಿನಲ್ಲಿ ನೆರವೇರಿಸಲಾಗುವುದು.

# ಏ.2 ರಿಂದ ಲಕ್ಕಶೆಟ್ಟಿಹಳ್ಳಿ ಶ್ರೀ ಕಾಳಿಕಾದೇವಿ ಜಾತ್ರೆ



ಹರಿಹರ, ಮಾ. 28- ಏಪ್ರಿಲ್ 2 ರಿಂದ 5ರವರೆಗೆ ಗ್ರಾಮದೇವತೆ ಶ್ರೀ ಕಾಳಿಕಾದೇವಿ ಜಾತ್ರಾ ಮಹೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದು ಹರಿಹರ ತಾಲ್ಲೂಕಿನ ಲಕ್ಕಶೆಟ್ಟಿಹಳ್ಳಿ ಶ್ರೀ ಕಾಳಿಕಾದೇವಿ ಸೇವಾ ಸಮಿತಿ ತಿಳಿಸಿದೆ.

ಮಾರ್ಚ್ 31ನೇ ರವಿವಾರ ಗ್ರಾಮದೇವತೆ ಶ್ರೀ ಕಾಳಿಕಾದೇವಿ ಮೂರ್ತಿಯನ್ನು ಮೆರವಣಿಗೆ ಊರಿನ ಪ್ರಮುಖ ಬೀದಿಗಳ ಮೂಲಕ ಸಾಗಿ ಊರಿನ ಗೌಡ್ರ ನಿಂಗಪ್ಪನವರ ಮನೆಯಲ್ಲಿ ಮೂರು ದಿನಗಳವರೆಗೆ ಪ್ರತಿಷ್ಠಾಪಿಸುವುದು.

ಏಪ್ರಿಲ್ 1ರಂದು ಸೋಮವಾರ ಬ್ರಾಹ್ಮೀ ಮುಹೂರ್ತದಲ್ಲಿ ಗ್ರಾಮದ ಬಣಕಾರರಿಂದ ದೇವಿಗೆ ಎಣ್ಣೆ ಅರಿಷಿಣದಿಂದ ಪೂಜೆ ಸಲ್ಲಿಸುವುದು. ಏಪ್ರಿಲ್ 2 ರ ಮಂಗಳವಾರ ಗ್ರಾಮದ ರೈತರಿಂದ ಪೂಜೆ ಹಾಗೂ ಧ್ವಜಾರೋಹಣ, ನಂತರ ಬ್ರಾಹ್ಮೀ ಮುಹೂರ್ತದಲ್ಲಿ ದೇವಿಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಅಂಕುರಾರ್ಪಣ, ನವಗ್ರಹ ಕಲಶ, ಅಷ್ಟಪಾಲಕರನ್ನು ಸ್ಥಾಪಿಸುವುದು. ದೇವಸ್ಥಾನದಲ್ಲಿ ಚಂಡಿಕಾ ಹೋಮ ನಡೆಯುವುದು.

ನಂತರ ದೇವಿಗೆ ಕುಂಕುಮಾರ್ಚನೆ ಮಾಡುವುದು. ನಂತರ ಮಧ್ಯಾಹ್ನ 12 ಗಂಟೆಯಿಂದ ಅನ್ನ ಸಂತರ್ಪಣೆ ನಡೆಯಲಿದೆ.

ರಾತ್ರಿ 9-30ಕ್ಕೆ ದೊಡ್ಡಗೌಡ್ರ ಮನೆಯಿಂದ ದೊಡ್ಡಬಂಡಿಯ ರಥವನ್ನು ಹೊರಡಿಸಿ, ನಿಂಗಪ್ಪ ನವರ ಮನೆಗೆ ಹೋಗಿ ಪೂಜೆ ಮಾಡಿಸಿ ನಂತರ ಬಸವೇಶ್ವರ ದೇವಸ್ಥಾನಕ್ಕೆ ಬರುವುದು. ಗೌಡ್ರ ಮನೆಯಿಂದ ದೇವಿಯನ್ನು ಬಸವೇಶ್ವರ ದೇವಸ್ಥಾನಕ್ಕೆ ಕರೆತಂದು ದೊಡ್ಡ ಬಂಡಿ ಮೇಲೆ ಸಿಂಗರಿಸಿದ ರಥದಲ್ಲಿ ಕುಳ್ಳಿರಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ರಾತ್ರಿ ಸಮಯದಲ್ಲಿ ಸಣ್ಣಗೌಡ್ರ ಮನೆಯಿಂದ ಘಟ್ಟಿಯನ್ನು ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತಂದು ನೆಲೆಗೊಳಿಸುವುದು. ದೊಡ್ಡಗೌಡ್ರ ಮನೆಯಿಂದ-ಬಣಕಾರ ಮನೆಯಿಂದ ಹುಲಿಸಿನ ಜೋಳವನ್ನು ದೇವಸ್ಥಾನಕ್ಕೆ ತರುವುದು.

ಏಪ್ರಿಲ್ 3 ರ ಬುಧವಾರ ಬೆಳಗಿನ ಜಾವ 4 ರಿಂದ 6 ರವರೆಗೆ ದೇವಿಯ ಘಟ್ಟಿಗಡಿಗೆ ಮತ್ತು ಹಿಟ್ಟಿನ ಕೋಣವನ್ನು ಉತ್ಸವದ ಮೂಲಕ ದೇವಸ್ಥಾನದ ಬಳಿ ತರುವುದು. ನಂತರ ಹಿಟ್ಟಿನಿಂದ ಮಾಡಿದ ಕೋಣವನ್ನು ವಧೆ ಮಾಡಿ ನಂತರ ಚರಗ ಚೆಲ್ಲಲಾಗುವುದು.

ಏಪ್ರಿಲ್ 4 ರ ಗುರುವಾರ ಸಂಜೆ ಮೇಳದವರಿಂದ ಚೌಡಕಿ ಕಾರ್ಯಕ್ರಮ ಜರುಗುವುದು. ನಂತರ ರಾತ್ರಿ 9 ಗಂಟೆಗೆ ಗ್ರಾಮದ ಮಾರುತಿ ನಾಟ್ಯ ಸಂಘದವರಿಂದ 'ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ' ನಾಟಕ ಪ್ರದರ್ಶನವಿದೆ.

ಏಪ್ರಿಲ್ 5ರ ಶುಕ್ರವಾರ ಬೆಳಿಗ್ಗೆ ಮುತ್ತೈದೆಯರಿಂದ ದೇವಿಗೆ ತಾಳಿ, ಕಡಗ ಹಾಕಿಸಿ ಉಡಿ ತುಂಬುವುದು ನಂತರ ರೈತರಿಂದ ಹುಲಸಿನ ಜೋಳವನ್ನು ಹಂಚುವ ಕಾರ್ಯಕ್ರಮವಿರುತ್ತದೆ.

# ಜಾಗತಿಕ ಹಿತ ಬಯಕೆಯೇ ಸಾಹಿತ್ಯ, ಕಲೆಯ ಉದ್ದೇಶ

ದಾವಣಗೆರೆ, ಮಾ. 28- ಸಾಹಿತ್ಯ ಮತ್ತು ಕಲೆಯ ಮೂಲ ಉದ್ದೇಶ ಜಾಗತಿಕ ಹಿತ ಮತ್ತು ಶಾಂತಿ ಬಯಸುವುದಾಗಿದೆ. ಆಗ ಮಾತ್ರ ಸಾಹಿತ್ಯ, ಕಲೆಗೆ ಸಾರ್ಥಕತೆ ಸಿಗಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಅಭಿಪ್ರಾಯಪಟ್ಟರು.

ನಗರದ ವಿಶ್ವವಿದ್ಯಾಲಯ ದೃಶ್ಯ ಕಲಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಿದ್ದ ಚಿತ್ರಕಲೆ ಹಾಗೂ ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಲೆ ಕೇವಲ ವಿಶ್ವ ಮನ್ನಣೆ ಪಡೆದರಷ್ಟೇ ಸಾಲದು, ವಿಶ್ವ ಶಾಂತಿಯ ಪ್ರಮುಖ ಉದ್ದೇಶವನ್ನು ಹೊಂದಿರಬೇಕೆಂದು ತಿಳಿಸಿದರು.

ಈ ಹಿಂದೆ ಅಮೆರಿಕಾದ ಯುದ್ಧ ಕೋರ ನೀತಿ ಖಂಡಿಸಿ ವಿಶ್ವಾದ್ಯಂತ ಸಾಹಿತ್ಯ ಕ್ರಾಂತಿ ಆದಾಗ ಕನ್ನಡದ ಸಾಹಿತಿಗಳೆಲ್ಲರೂ 'ಯುದ್ಧ ಬೇಡ, ಶಾಂತಿ ಬೇಕು' ಎಂಬ ಪ್ರಮುಖ ಧೋರಣೆಯೊಂದಿಗೆ ಯುದ್ಧ ವಿರೋಧಿಸಿ, ಶಾಂತಿ ಪರವಾದ ಸಾಹಿತ್ಯ ರಚಿಸಿದ್ದನ್ನು ಸ್ಮರಿಸಿದ ಅವರು, ಅದರಂತೆ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದ ಟಿ.ಬಿ. ಸೊಲಬಕ್ಕನವರ್ ಅವರು ನೂರು ಅಡಿ ಉದ್ದದ ಕ್ಯಾನ್‌ವಾಸ್ ಮೇಲೆ ಶಾಂತಿ ಸಾರುವ ಚಿತ್ರಗಳನ್ನು ಬರೆದು ಇಡೀ ರಾಜ್ಯಾದ್ಯಂತ 'ನಮ್ಮ ನಡೆ ಶಾಂತಿಯ ಕಡೆ' ಎಂಬ ಅಭಿಯಾನ ಕೈಗೊಂಡಿದ್ದರು ಎಂದು ಹೇಳಿದರು. ಇಂದು ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗಿವೆ. ಆದರೆ ಭಯೋತ್ಪಾದನೆಗೆ ಭಯೋತ್ಪಾದನೆಯೇ ಉತ್ತರ ಆಗಬಾರದು. ಬದಲಿಗೆ ಕಲೆ, ಸಾಹಿತ್ಯ, ಸಂಸ್ಕೃತಿ ಉತ್ತರವಾಗಬೇಕೆಂದರು.



**ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲೆ ಹಾಗೂ ಛಾಯಾಚತ್ರ ಪ್ರದರ್ಶನ ಉದ್ಘಾಟಿಸಿದ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್**

ಸಮಾಜದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತದ ಬಗ್ಗೆ ಹೆಚ್ಚು ಹೆಚ್ಚು ಅಭಿರುಚಿ ಬೆಳೆಸಿದಾಗ, ಅಲ್ಲಿ ನಿಜವಾದ ಸಾಮರಸ್ಯ ಮೂಡಲು ಸಾಧ್ಯವಿದೆ ಎಂದರು.

ಇದೇ ಸಂದರ್ಭದಲ್ಲಿ ವಿಜಯಪುರದ ಕಲಾವಿದ ರಮೇಶ್ ಚವ್ಹಾಣ್ ಅಮೂರ್ತ ಕಲೆಯ ಚಿತ್ರ ಕಲಾಕೃತಿಗಳು ಹಾಗೂ ಛಾಯಾಚಿತ್ರ ಕಲಾವಿದ ಸತೀಶ್ ಕಲಾಲ್ ಅವರ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಯಿತು. ಕೊರೊನಾ ಸೇರಿದಂತೆ ವಿವಿಧ ಘಟನಾವಳಿಗಳನ್ನು ಬಿಂಬಿಸುವ ರಮೇಶ್ ಚವ್ಹಾಣರ ಚಿತ್ರ ಕಲಾಕೃತಿಗಳು ಗಮನ ಸೆಳೆದವು.

ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.

ಕಲಾ ವಿಮರ್ಶಕ ದತ್ತಾತ್ರೇಯ ಎನ್. ಭಟ್, ಬಾಲಾಜಿ ಆರ್ಟ್ ಫ್ರೇಮಿಂಗ್‌ನ ಪ್ರಶಾಂತ್ ಹೆಗಡೆ, ಸಹಾಯಕ ಪ್ರಾಧ್ಯಾಪಕ ಸತೀಶ್‌ಕುಮಾರ್ ಪಿ. ವಲ್ಲೇಪುರೆ, ನಾರಾಯಣ, ರವೀಂದ್ರ ಅರಳಗುಪ್ಪಿ, ಶಿವಶಂಕರ್ ಸುತಾರ್, ಎ. ಮಹಾಲಿಂಗಪ್ಪ ಮತ್ತಿತರರು ಭಾಗವಹಿಸಿದ್ದರು.

# ಚುನಾವಣೆ ; ಚೆಕ್‌ಪೋಸ್ಟ್‌ಗಳಿಗೆ ಎಸ್ಪಿ ಉಮಾ ಭೇಟಿ, ಪರಿಶೀಲನೆ



ದಾವಣಗೆರೆ, ಮಾ. 27- ಜಿಲ್ಲೆಯಲ್ಲಿ ಲೋಕಸಭಾ ಚುನಾವಣೆ ಅಂಗವಾಗಿ ದಾವಣಗೆರೆ ನಗರ ವ್ಯಾಪ್ತಿಯಲ್ಲಿ ತೆರೆದಿರುವ ವಿವಿಧ ಚೆಕ್‌ಪೋಸ್ಟ್‌ಗಳಿಗೆ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚೆಕ್‌ಪೋಸ್ಟ್‌ಗಳಲ್ಲಿ ಕರ್ತವ್ಯ ನಿರತ ಅಧಿಕಾರಿ/ಸಿಬ್ಬಂದಿಯವರುಗೆ ನಿರ್ಲಕ್ಷ್ಯ ಮಾಡದೇ ಚುನಾವಣಾ ಕರ್ತವ್ಯದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚನೆ ನೀಡಿದರು.

# ಹರಿಹರ ನಗರಸಭೆಯಿಂದ ಮತದಾನ ಜಾಗೃತಿ




ಹರಿಹರ, ಮಾ.28- ನಗರಸಭೆಯ ಸ್ವೀಪ್ ತಂಡದ ವತಿಯಿಂದ ನಗರದ ರೈಲ್ವೆ ಮತ್ತು ಬಸ್ ನಿಲ್ದಾಣದ ಆವರಣದಲ್ಲಿ ನಾಗರಿಕರಿಗೆ ಮತದಾನದ ಮಹತ್ವದ ಬಗ್ಗೆ ಪೋಸ್ಟರ್ ಮೂಲಕ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಪೌರಾಯುಕ್ತ ಐಗೂರು ಬಸವರಾಜ್, ಕಛೇರಿಯ ವ್ಯವಸ್ಥಾಪಕ ಶಿವಕುಮಾರ್, ಕಂದಾಯ ಅಧಿಕಾರಿ ರಮೇಶ್, ಸಿಎಓ ಜಗದೀಶ್, ಅಭಿಯಾನ ವ್ಯವಸ್ಥಾಪಕ ಶಿವಕುಮಾರ್, ನಾಗೇಶ್, ಕರಿಯಪ್ಪ, ವಿನಾಯಕ, ವೀಣಾ, ಲತಾ ಇತರರು ಹಾಜರಿದ್ದರು.

# 'ಪ್ರಜಾಧ್ವನಿ-2' ರದ್ದು ಮಾಡಿದ ಕಾಂಗ್ರೆಸ್

**(1ನೇ ಪುಟದಿಂದ)** ಕಾರ್ಯಕ್ರಮಗಳನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ, ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದಿದ್ದಾರೆ. ಸಚಿವ ಮುನಿಯಪ್ಪ ಹಾಗೂ ವಿಧಾನಸಭೆಯ ಮಾಜಿ ಸಭಾಧ್ಯಕ್ಷ ರಮೇಶ್‌ಕುಮಾರ್ ನಡುವೆ ಅಭ್ಯರ್ಥಿ ಆಯ್ಕೆ ವಿಷಯದ ಜಗಳ ಬೀದಿಗೆ ಬಂದಿದೆ. ಇನ್ನು ಹಾಸನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಾಜಣ್ಣ ಸಮ್ಮುಖದಲ್ಲೇ ಕಾರ್ಯಕರ್ತರು ಕುರ್ಚಿಗಳನ್ನು ಎತ್ತಿ ಬಡಿದಾಡಿಕೊಂಡಿದ್ದರು. ಹಾಸನ ಲೋಕಸಭಾ ಕ್ಷೇತ್ರಕ್ಕೆ ಮೊದಲ ಸುತ್ತಿನಲ್ಲೇ ಕಾಂಗ್ರೆಸ್ ಅಭ್ಯರ್ಥಿ ಹೆಸರನ್ನು ಪ್ರಕಟಿಸಲಾಗಿತ್ತು, ನಂತರದ ದಿನದಲ್ಲಿ ಕಾರ್ಯಕರ್ತರು ಹಾಗೂ ಉಸ್ತುವಾರಿ ಸಚಿವರ ನಡುವಿನ ಈ ಗೊಂದಲದಿಂದ ಬೇಸತ್ತ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ನಾಳೆಯಿಂದ ಎರಡು ದಿನಗಳ ಕಾಲ ಈ ಜಿಲ್ಲೆಗಳಲ್ಲಿ ನಡೆಯಬೇಕಿದ್ದ ಪ್ರವಾಸವನ್ನು ರದ್ದು ಮಾಡಿದ್ದಾರೆ.

# ಕ್ರಿಕೆಟ್ ಆಡುವ ಮೂಲಕ ಗಮನ ಸೆಳೆದ ಬಿಜೆಪಿ ಅಭ್ಯರ್ಥಿ



ದಾವಣಗೆರೆ, ಮಾ.28- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಇಂದು ಬೆಳ್ಳಂ ಬೆಳಗ್ಗೆ ನಗರದಲ್ಲಿ ಮತಯಾಚನೆ ನಡೆಸಿದರು. ನಗರದ ವಾಟರ್ ಟ್ಯಾಂಕ್ ಪಾರ್ಕ್, ಹಿರಿಯ ನಾಗರಿಕರ ಉದ್ಯಾನವನ, ಇಂಡಿಯನ್ ಕಾಫಿ ಬಾರ್ ಸೇರಿದಂತೆ, ಪ್ರಮುಖ ಜನಸಂದಣಿ ಇರುವ ಕಡೆ ತೆರಳಿ ಮತಯಾಚನೆ ಮಾಡಿದರು.

ಕೇಂದ್ರ ಬಿಜೆಪಿ ಸರ್ಕಾರದ ಯೋಜನೆಗಳ ಬಗ್ಗೆ ವಾಯುವಿಹಾರಿಗಳಿಗೆ ವಿವರಣೆ ನೀಡಿದ ಅವರು, ಯಾವ ಕಾರಣಕ್ಕಾಗಿ ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಬೇಕು ಎಂದು ತಿಳಿಸಿದರು.

ಬೆಳ್ಳಂ ಬೆಳಗ್ಗೆ ರಸ್ತೆ ಬದಿಯಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದ ಪೌರ ಕಾರ್ಮಿಕರ ಜೊತೆ ಸಮಾಲೋಚನೆ ನಡೆಸಿದ ಗಾಯತ್ರಿ ಸಿದ್ದೇಶ್ವರ, ಪ್ರಧಾನಿ ನರೇಂದ್ರ ಮೋದಿ ಅವರು ಪೌರ ಕಾರ್ಮಿಕರ ಕಷ್ಟ ಅರಿತುಕೊಂಡು ಸ್ವಚ್ಛ ಭಾರತ್ ಯೋಜನೆ ಜಾರಿಗೊಳಿಸಿದ್ದು, ಅಷ್ಟೇ ಅಲ್ಲ ಮೋದಿ ಜೀ ಅವರು ಯಾವಾಗಲೂ ಪೌರಕಾರ್ಮಿಕರಿಗೆ ಗೌರವ ಸಲ್ಲಿಸುತ್ತಾ ಬಂದಿದ್ದಾರೆ ಎಂದರು.

ಮೋತಿ ವೀರಪ್ಪ ಕಾಲೇಜು ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದ ಹುಡುಗರ ಜೊತೆ ಕಾಲ ಕಳೆದ ಗಾಯತ್ರಿ ಸಿದ್ದೇಶ್ವರ ಅವರು, ಬ್ಯಾಟಿಂಗ್ ಮಾಡುವ ಮೂಲಕ ಮತದಾನದ ಹಕ್ಕು ಹೊಂದಿರುವ ಎಲ್ಲ ಯುವಕರು ಬಿಜೆಪಿಗೆ ಮತ ಚಲಾಯಿಸುವಂತೆ ಕೋರಿದರು. ಜೊತೆಗೆ ಶಟ್ಲ್ ಕಾಕ್ ಆಡುವ ಮೂಲಕ ಗಮನ ಸೆಳೆದರು.

ಹರಿಹರ ಬಿಜೆಪಿ ಶಾಸಕ ಬಿ.ಪಿ. ಹರೀಶ್, ಡಾ.ನಾಗಪ್ರಕಾಶ್, ಬಿಜೆಪಿ ಮುಖಂಡರಾದ ಜಿ.ಎಸ್.ಅನಿತ್ ಕುಮಾರ್, ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ ದಾಸ್ ಕರಿಯಪ್ಪ, ಎಚ್.ಎನ್. ಶಿವಕುಮಾರ್, ಸಿದ್ದೇಶ್, ನಾಗಣ್ಣ, ಹರೀಶ್, ಜೋತಿ ಸಿದ್ದೇಶ್, ಉಪ ಮೇಯರ್ ಯಶೋಧಾ ಹೆಗಪ್ಪ, ಶಾರದಾ ರಾಯ್ಕರ್, ಸಚಿನ್, ಬಿಜೆಪಿ ಮುಖಂಡರು, ಕಾರ್ಯಕರ್ತರು ಜೊತೆಯಲ್ಲಿದ್ದರು.

# ಸಿ.ಟಿ. ರವಿ ಕ್ಷಮೆ ಯಾಚನೆಗೆ ಭೋವಿ ಸಮಾಜದ ಆಗ್ರಹ

ದಾವಣಗೆರೆ, ಮಾ. 28- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿಯವರ ತಾಯಿಯ ಬಗ್ಗೆ ಬಿಜೆಪಿಯ ಸಿ.ಟಿ. ರವಿ ಅವಹೇಳಕಾರಿಯಾಗಿ ಮಾತನಾಡಿರುವುದು ಭೋವಿ ಸಮಾಜಕ್ಕೆ ನೋವುಂಟು ಮಾಡಿದೆ. ಈ ಕೂಡಲೇ ಸಿ.ಟಿ.ರವಿ ಕ್ಷಮೆ ಯಾಚಿಸಬೇಕು. ಇಲ್ಲವಾದಲ್ಲಿ ಅವರು ದಾವಣಗೆರೆ ಜಿಲ್ಲೆಗೆ ಬಂದಾಗ ಕಪ್ಪು ಬಟ್ಟೆ ಪ್ರದರ್ಶಿಸಿ, ಬಹಿಷ್ಕರಿಸಲಾಗುವುದು ಎಂದು ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಹೆಚ್. ಜಯಣ್ಣ ಹೇಳಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ವ್ಯವಸ್ಥೆಯಲ್ಲಿ ಟೀಕೆ ಟಿಪ್ಪಣಿಗಳಿರುವುದು ಸಹಜ. ಆದರೆ ಶಿವರಾಜ್ ತಂಗಡಗಿಯವರ ತಾಯಿ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಸಿ.ಟಿ.ರವಿ ಸಂಸ್ಕೃತಿ ಎಂತಹುದು ಎಂದು ತೋರಿಸುತ್ತದೆ ಎಂದರು. ಸಿ.ಟಿ. ರವಿ ಹೊಲಸು ಮನಸ್ಸಿನ ರಾಜಕಾರಣಿ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಡಿ.ವಿ. ಮಲ್ಲಿಕಾರ್ಜುನ್, ಜಿ.ಸಿ. ಮಂಜಪ್ಪ, ಶ್ರೀಮತಿ ಉಮಾ ಕುಮಾರ್, ಅರ್ಜುನ್, ನಾಗರಾಜ್, ರಾಮಾಂಜನೇಯ ಹಾಗೂ ಇತರರಿದ್ದರು.

# ಹರಪನಹಳ್ಳಿ ಟಿಎಂಎಇಎಸ್ ಶಿಕ್ಷಣ ಕಾಲೇಜ್ ವಿದ್ಯಾರ್ಥಿ ಸಂಘದ ಉದ್ಘಾಟನೆ



ಹರಪನಹಳ್ಳಿ, ಮಾ. 28- ಇಲ್ಲಿನ ಟಿಎಂಎಇಎಸ್ ಶಿಕ್ಷಣ ಮಹಾ ವಿದ್ಯಾಲಯದಲ್ಲಿ 2023-24ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಆಡಳಿತ ವಿಭಾಗದ ಕುಲ ಸಚಿವ ಎಸ್. ಎನ್ . ರುದ್ರೇಶ್ ಉದ್ಘಾಟಿಸಿ, ಬಿಇಡಿ ಪ್ರಶಿಕ್ಷಣಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಹಾಗೂ ವ್ಯಕ್ತಿತ್ವ ವಿಕಸನದ ಕುರಿತು ಉಪನ್ಯಾಸ ನೀಡಿದರು.

ಟಿಎಂಎಇ ಸಂಸ್ಥೆಯ ಕಾರ್ಯದರ್ಶಿ ಡಾ. ಟಿ.ಎಂ.ಚಂದ್ರಶೇಖರಯ್ಯ ಅಧ್ಯಕ್ಷತೆ ವಹಿಸಿದ್ದರು. ಜ್ಞಾನಗಂಗೋತ್ರಿ ಆಡಳಿತ ಅಧಿಕಾರಿ ಪ್ರತೀಕ್ ಟಿ.ಎಂ ಉಪಸ್ಥಿತರಿದ್ದರು. ಪ್ರಾಚಾರ್ಯ ಟಿ.ಎಂ. ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು.

ಸಹಾಯಕ ಪ್ರಾಧ್ಯಾಪಕ ಡಾ. ಎನ್.ಟಿ ಮರಳಸಿದ್ದಪ್ಪ ಪ್ರತಿಜ್ಞಾ ವಿಧಿ ಬೋಧಿಸಿದರು. ಸಹಾಯಕ ಪ್ರಾಧ್ಯಾಪಕ ಟಿ. ಹೆಚ್ ಗಿರೀಶ್ ವಂದಿಸಿದರು.

ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಾದ ಮಮತಾ ಹಾಗೂ ನೀಲಮ್ಮ ನಿರೂಪಿಸಿದರು.

# ಭದ್ರತಾ ಕೊಠಡಿ ಪರಿಶೀಲಿಸಿದ ಜಿಲ್ಲಾ ಚುನಾವಣಾಧಿಕಾರಿ

**(1ನೇ ಪುಟದಿಂದ)** ಹೊಳೆಹರಳಹಳ್ಳಿ ಹಾಗೂ ಹರಿಹರ ತಾಲ್ಲೂಕು ನಂದಿಗುಡಿ ಚೆಕ್‌ಪೋಸ್ಟ್ ಪರಿಶೀಲನೆ ನಡೆಸಿ ಮಾರ್ಗದಲ್ಲಿ ಹೋಗುವ ಎಲ್ಲ ಮಾದರಿಯ ವಾಹನಗಳನ್ನು ಪರಿಶೀಲನೆ ಮಾಡಬೇಕು. ವಾಹನದಲ್ಲಿ ಸರಕು ಸಾಗಣೆ ಮಾಡುತ್ತಿದ್ದಲ್ಲಿ ನಿಯಮಾನುಸಾರ ಇನ್‌ವಾಯ್ಸ್ ಬಿಲ್, ಡೆಲಿವರಿ ನೋಟ್ ಎಲ್ಲಿಂದ ಎಲ್ಲಿಗೆ, ಯಾವ ಮಾದರಿ ವಸ್ತು ಎಂದು ತಿಳಿದುಕೊಂಡು ದಾಖಲು ಮಾಡಬೇಕೆಂದು ಸೂಚನೆ ನೀಡಿದರು. ಈ ವೇಳೆ ಮಾಯಕೊಂಡ ಸಹಾಯಕ ಚುನಾವಣಾಧಿಕಾರಿ ದುರ್ಗಶ್ರೀ, ಹೊನ್ನಾಳಿ ಸಹಾಯಕ ಚುನಾವಣಾಧಿಕಾರಿ ಅಭಿಷೇಕ್ ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

# 'ಮಳೆ-ಬೆಳೆ ಸಮೃದ್ಧಿಯಾಗಲಿ, ಸಕಲ ಜೀವರಾಶಿಗಳಿಗೆ ಒಳಿತಾಗಲಿ'



**ದುಗ್ಗಮ್ಮ ದೇವಸ್ಥಾನದಲ್ಲಿ ಬಸವರಾಜ ಗುರೂಜಿ ಪ್ರಾರ್ಥನೆ**

ದಾವಣಗೆರೆ, ಮಾ. 28- ಕಂಚಿಕೆರೆ ಸುಕ್ಷೇತ್ರ ಬಿದ್ದಹನುಮಪ್ಪನಮಟ್ಟಿ ಶ್ರೀ ಬಸವರಾಜ ಗುರೂಜಿ ಅವರು ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವ ಸ್ಥಾನಕ್ಕೆ ಆಗಮಿಸಿ, ಅಮ್ಮನಿಗೆ ಸೀರೆ, ಕುಪ್ಪಸ, ಅರಿಷಿಣ, ಕುಂಕುಮ, ಉಡಿ ಅಕ್ಕಿ, ಬಳೆ, ತಾಂಬೂಲ, ಫಲಪುಷ್ಪ, ಹಣ್ಣು-ಕಾಯಿಯನ್ನು ಸಮರ್ಪಿಸಿದರು. ಪೂಜ್ಯರು ಹಿಮಾಲಯದ ಗಂಗಾಜಲದಿಂದ ಪ್ರೋಕ್ಷಿಸಿ ಪೂಜೆ, ಮಹಾಮಂಗಳಾರತಿಯೊಂದಿಗೆ ಮಳೆ-ಬೆಳೆ ಸಮೃದ್ಧಿಯಾಗಲಿ, ಸಕಲ ಜೀವರಾಶಿಗಳಿಗೆ ಒಳಿತಾಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿದರು. ಅಲ್ಲದೇ ಶ್ರೀ ಈಶ್ವರ ಗಣಪತಿ, ಶ್ರೀ ಮಹಾವಿಷ್ಣು, ಶ್ರೀ ಸೂರ್ಯನಾರಾಯಣ ಹಾಗೂ ಮಕ್ಕಳ ದೇವತೆಗಳಾದ ಶ್ರೀ ಕೆಮ್ಮಿನಮ್ಮ, ಶ್ರೀ ಮೈಲಮ್ಮ, ಶ್ರೀ ಸುಂಕದಮ್ಮ, ಶ್ರೀ ಸಿಡುಬಿನಮ್ಮ, ಶ್ರೀ ದಡಾರಮ್ಮ, ದೇವರುಗಳಿಗೆ ದರ್ಶನ ಮತ್ತು ಪೂಜೆ ಸಲ್ಲಿಸಿದರು.

# ಹರಿಹರ: ಚೆಕ್‌ಪೋಸ್ಟ್‌ನಲ್ಲಿ ಬೈಕ್‌ಗಳಲ್ಲಿ ಸಾಗಿಸುತ್ತಿದ್ದ 2.81 ಲಕ್ಷ ರೂ.ಗಳ ವಶ



ಹರಿಹರ, ಮಾ.28- ನಗರದ ತುಂಗಭದ್ರಾ ನದಿ ಸೇತುವೆ ಪಕ್ಕದ ರಾಘವೇಂದ್ರ ಸ್ವಾಮಿ ಮಠದ ಹತ್ತಿರ ಇರುವ ಚೆಕ್ ಪೋಸ್ಟ್‌ನಲ್ಲಿ ನಿನ್ನೆ ಎರಡು ಬೈಕ್‌ಗಳಲ್ಲಿ ಸಾಗಿಸುತ್ತಿದ್ದ 2 ಲಕ್ಷದ 81 ಸಾವಿರದ 500 ರೂಪಾಯಿ ಹಣವನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಸಹಾಯಕ ಚುನಾವಣೆ ಅಧಿಕಾರಿ ಭಾವನಾ ಬಸವರಾಜ್ ಮತ್ತು ತಹಶೀಲ್ದಾರ್ ಗುರುಬಸವರಾಜ್ ತಿಳಿಸಿದ್ದಾರೆ.

ಬೈಕ್ (ಕೆಎ17 ಎಕ್ಸ್ 9909) ಸವಾರ ಹನುಮಂತಪ್ಪ ಗುಡ್ಡದ್ ಎಂಬ ಕವಲೆತ್ತು ಗ್ರಾಮದ ಯುವಕನಿಂದ 1.84 ಲಕ್ಷ ಮತ್ತು ಸಂತೋಷ ಯು.ಹೆಚ್ (ಕೆಎ 17 ಹೆಚ್‌ಸಿ 4987) ಹಾಲೂರು ಗ್ರಾಮದ ಯುವಕನಿಂದ 97.5 ಸಾವಿರ ವಶಕ್ಕೆ ಪಡೆದು, ಆ ಹಣವನ್ನು ಖಜಾನೆಯಲ್ಲಿ ಇರಿಸಿದ್ದು, ಜಿಲ್ಲಾ ಚುನಾವಣೆ ಶಾಖೆಯ ಗಮನಕ್ಕೆ ತರಲಾಗಿದ್ದು, ಅವರು ಹಣವನ್ನು ಸಾಗಿಸುತ್ತಿದ್ದವರ ದಾಖಲೆಗಳನ್ನು ಪರಿಶೀಲನೆ ನಡೆಸಲಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಚೆಕ್ ಪೋಸ್ಟ್ ಸಿಬ್ಬಂದಿಗಳಾದ ಜಿ.ಪಿ. ಸಿದ್ದೇಶ್, ಎ ಎಸ್. ಸಣ್ಣಯ್ಯ, ಚಮನ್ ಸಾಬ್, ಚುನಾವಣೆ ಸಿಬ್ಬಂದಿಗಳಾದ ಆಶೋಕ, ಸೋಮಶೇಖರ್, ಉಮೇಶ್ ಇತರರು ಹಾಜರಿದ್ದರು.

# ಅಪ್ರಾಪ್ತ ಮಗನ ಮೇಲೆ ಹಲ್ಲೆ ಮಾಡಿದ ತಂದೆಗೆ ಶಿಕ್ಷೆ

ದಾವಣಗೆರೆ, ಮಾ. 28- ತನ್ನ ಅಪ್ರಾಪ್ತ ಮಗನಿಗೆ ಕಬ್ಬಿಣದ ಪೈಪ್‌ನಿಂದ ಮಾರಣಾಂತಿಕ ಹಲ್ಲೆ ಮಾಡಿದ ಆರೋಪಿ ಅನಿಲ್ ಕುಮಾರ್ (45)ಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 5 ಸಾವಿರ ರೂ. ದಂಡ ತಪ್ಪಿದಲ್ಲಿ 3 ತಿಂಗಳು ಕಾರಾಗೃಹ ಶಿಕ್ಷೆ ವಿಧಿಸಿದೆ.

ತನ್ನ ಮಗ ಮಾತು ಕೇಳದೆ ಹೊರಗಡೆ ಸುತ್ತಾಡುತ್ತಾನೆ ಎಂದು ಆರೋಪಿ ಮಂಜುನಾಥ್ ತನ್ನ ಅಪ್ರಾಪ್ತ ಮಗನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ಈ ಕುರಿತು ನ್ಯಾಮತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆರೋಪ ಸಾಬೀತಾದ್ದರಿಂದ ಹಾಗೂ ಈಗಾಗಲೇ ಆರೋಪಿ 2 ವರ್ಷ 8 ತಿಂಗಳು ಕಾರಾಗೃಹ ಬಂಧನದಲ್ಲಿದ್ದರಿಂದ, ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಅವರು ಆರೋಪಿಗೆ 5 ಸಾವಿರ ರೂ. ದಂಡ ವಿಧಿಸಿದ್ದು, ಸಂತ್ರಸ್ತ ಬಾಲಕನಿಗೆ ಸರ್ಕಾರದಿಂದ 1 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಿ ದ್ದಾರೆ. ಪಿರ್ಯಾದಿ ಪರ ಸರ್ಕಾರಿ ವಕೀಲ ಮಂಜುನಾಥ ಬಿ. ವಾದ ಮಂಡಿಸಿದ್ದರು.

# ಹರಿಹರ : ಮಾವನ ಕೊಂದ ಸೊಸೆಗೆ 4 ವರ್ಷ ಸಾಧಾರಣ ಕಾರಾಗೃಹ ಶಿಕ್ಷೆ

ದಾವಣಗೆರೆ, ಮಾ. 28- ಮಾವ (ಪತಿಯ ತಂದೆ)ನನ್ನು ಕೊಂದ ಆರೋಪದ ಹಿನ್ನೆಲೆಯಲ್ಲಿ ಜ್ಯೋತಿ (32) ಎಂಬಾಕೆಗೆ ಇಲ್ಲಿನ ಘನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 4 ವರ್ಷ ಸಾಧಾರಣ ಕಾರಾಗೃಹ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಹರಿಹರ ಟೌನ್ ವಿದ್ಯಾನಗರ ವಾಸಿ ವೀರೇಶ್ ಅವರು ಜ್ಯೋತಿಯನ್ನು ವಿವಾಹವಾಗಿದ್ದು, ವೀರೇಶ್ ಅವರಿಗೆ 70 ವರ್ಷದ ವೃದ್ದ ತಂದೆ ಇದ್ದರು. ತಂದೆಯ ಚಾಕರಿ ಮಾಡುವ ಸಲುವಾಗಿ ವೀರೇಶ್ ಹಾಗೂ ಜ್ಯೋತಿಗೆ ಪದೇ ಪದೇ ಜಗಳವಾಗುತ್ತಿತ್ತು.

2022ರ ನವೆಂಬರ್ 4ರಂದು ನನ್ನ ತಂದೆ ಶಿವಕುಮಾರ್ ಅವರು ಮಲಗಿದ್ದಾಗ ಜ್ಯೋತಿಯು ಬಿಸಿ ನೀರು ಹಾಗೂ ಕಾರದ ಪುಡಿ ಎರಚಿ, ವೇಲ್‌ನಿಂದ ಕುತ್ತಿಗೆಗೆ ಬಿಗಿದು ಒನಕೆಯಿಂದ ತಲೆಗೆ ಹೊಡೆದು ಸಾಯಿಸಿದ್ದಾಳೆ ಎಂದು ವೀರೇಶ್ ಹರಿಹರ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ವಿಜಯಾನಂದ ಜೆ.ವಿ. ಅವರು ಜ್ಯೋತಿ ಅವರ ಮೇಲಿನ ಆರೋಪ ಸಾಬೀತಾಗಿದ್ದರಿಂದ ಮಾ.27ರಂದು ಆರೋಪಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ವಕೀಲರಾದ ಸತೀಶ್ ಕುಮಾರ್ ಕೆ. ಎಸ್. ಪಿರ್ಯಾದಿ ಪರ ವಾದ ಮಂಡಿಸಿದ್ದರು.

# ಗೌಡರ ವಿರುದ್ಧ ಹೋರಾಟ ಹೊಸದೇನಲ್ಲ : ಡಿಕೆಶಿ

**(1ನೇ ಪುಟದಿಂದ)** ಖರೀದಿಸಿ ಜನರಿಗೆ ಉಚಿತವಾಗಿ ಹಂಚಿದ್ದಾರೆ, ಮೆಡಿಕಲ್ ಕಿಟ್ ನೀಡಿದ್ದರು, ಸರ್ಕಾರ ಶವಗಳನ್ನು ಜೆಸಿಬಿಯಲ್ಲಿ ಎಸೆಯುತ್ತಿರುವಾಗ, ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕೆ ಮನೆಯವರು ಬಾರದಿದ್ದಾಗ, ಸುರೇಶ್ ಪಿಪಿಇ ಕಿಟ್ ಧರಿಸಿ ಶವಗಳ ಅಂತ್ಯ ಸಂಸ್ಕಾರ ಮಾಡಿದ್ದರು.

ಜನ ನಾಯಕರು ಮನೆಯಿಂದ ಆಚೆ ಬರಲು ಹಿಂಜರಿಯುತ್ತಿದ್ದಾಗ ಸುರೇಶ್ ಕೋವಿಡ್ ಆಸ್ಪತ್ರೆಗಳಿಗೆ ತೆರಳಿ, ಸೋಂಕಿತರ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು, ಕಷ್ಟ ಕಾಲದಲ್ಲಿ ಪ್ರಾಣವನ್ನೂ ಲೆಕ್ಕಿಸದೆ ಕ್ಷೇತ್ರದ ಜನರಿಗಾಗಿ ಶ್ರಮಿಸಿದ್ದಾರೆ, ಪ್ರತಿ ಹಳ್ಳಿ ಸುತ್ತಾಡಿ ಪಂಚಾಯತ್ ಸದಸ್ಯನಂತೆ ಕೆಲಸ ಮಾಡಿದ್ದಾರೆ ಎಂದರು.

ಕೋಲಾರದಲ್ಲಿ ಎಲ್ಲಾ ನಾಯಕರು ಒಟ್ಟಾಗಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಕೆಲಸ ಮಾಡಲಿದ್ದಾರೆ. ಯಾರ ವೈಯಕ್ತಿಕ ಪ್ರತಿಷ್ಠೆಗೂ ಪಕ್ಷದಲ್ಲಿ ಅವಕಾಶ ನೀಡುವುದಿಲ್ಲ, ಕೋಲಾರ ಟಿಕೆಟ್ ವಿಚಾರವಾಗಿ ಯಾರೂ ರಾಜೀನಾಮೆ ನೀಡಲ್ಲ, ಒತ್ತಡ ಇದೆ, ಯಾರಿಗೂ ಟಿಕೆಟ್ ಘೋಷಣೆ ಮಾಡಿಲ್ಲ, ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಚರ್ಚೆ ಮಾಡಲಾಗುವುದು ಎಂದರು. ಚಿತ್ರದುರ್ಗದಲ್ಲಿ ಚಂದ್ರಪ್ಪ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ, ಬಿಜೆಪಿಯಿಂದ ಯಾರನ್ನಾದರೂ ನಿಲ್ಲಿಸಲಿ, ಹಾಲಿ ಸಂಸದರಿಗೆ ಟಿಕೆಟ್ ನೀಡಿಲ್ಲ, ಆ ಪಕ್ಷ ದುರ್ಬಲವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ ಎಂದರು.

**IN THE COURT OF THE SECOND ADDITIONAL SENIOR CIVIL JUDGE, AT DAVANAGERE**

**S.C. 5/2023**

Plaintiff : Channagiri Virupaksappa, Dharmashala Old Boys Association, Represented by Its Chairman, Sri. C.R. Virupakshappa, - *V/s* -

Defendants : Lakshmi Credit Co-Operative Society Ltd. Represented by Its President and others.

Defendant No.1 : Lakshmi Credit Co-Operative Society Ltd. Represented by Its President, No. 461, Kuvempu Road, DAVANAGERE-.577002

**SUIT SUMMONS TO THE 1ST DEFENDANT BY SUBSTITUED SERVICE BY PAPER PUBLICATION**

Whereas, the above named plaintiff has filed the suit against the 1st defendant and others for recovery of Rs.80,030/- together with court costs, current and future interest at the rate of 9.75% per annum from the date of suit till realisation. The 1st defendant avoided the service of the suit summons sent through the Hon'ble Court and also by registered post with acknowledgement due. Hence this publication.

Now the above case is posted to 23rd day of April 2024 for the appearance of the 1st defendant and the 1st defendant is hereby called upon to appear in the above case on **23rd day of April 2024 at 11.00 AM** either personally or through an advocate, failing which all further proceedings will take place in your absence.

Given under my hand and seal on 26th day of Feb 2024 at Davanagere.

Place: Davanagere.
Date : 26.2.2024

**By order of the court**
**Sd/- Chief Ministerial Officer**
**Principal Senior Civil Judge & CJM Court, Davanagere.**

**AQUASHINE** RO Water Purifiers



Exchange Offer AVAILABLE

Summer Offer 6,990/-

ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಫಿಲ್ಟರ್‌ಗಳನ್ನು ಸರ್ವೀಸ್ ಮಾಡಲಾಗುತ್ತದೆ.
ಹಾಗೂ ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ದೊರೆಯುತ್ತವೆ.

# 794/ಬಿ44, 1ನೇ ಕ್ರಾಸ್, ರಾಘವೇಂದ್ರ ಸ್ಕೂಲ್ ಹತ್ತಿರ, ಕೊಟ್ಟೂರೇಶ್ವರ ಬಡಾವಣೆ, ಡಿ.ಸಿ.ಎಂ. ರೋಡ್, ದಾವಣಗೆರೆ
ಮೊ. : 9980727767

## ದೊಣೆಹಳ್ಳಿಯಲ್ಲಿ ಇಂದು ಸರ್ವ ಶರಣರ 'ಬಹುತ್ವ' ಸಮಾವೇಶ

ಜಗಳೂರು ತಾಲ್ಲೂಕಿನ ದೊಣೆಹಳ್ಳಿ ಶ್ರೀ ಶರಣ ಬಸವೇಶ್ವರ ದಾಸೋಹ ಮಠದಲ್ಲಿ ದಾಸೋಹ ಸಂಸ್ಕೃತಿ ಉತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10.30 ಕ್ಕೆ ಸರ್ವ ಶರಣರ'ಬಹುತ್ವ' ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಇಳಕಲ್ ಶ್ರೀ ಗುರು ಮಹಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬೆಂಗಳೂರಿನ ಶ್ರೀ ಮಲ್ಲಿಕಾರ್ಜುನ ದೇವರು ಅಧ್ಯಕ್ಷತೆ ವಹಿಸಲಿದ್ದು, ಚಿತ್ರದುರ್ಗದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕೂಡ್ಲಿಗಿ ಶ್ರೀ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ, ಪ್ರಾಚಾರ್ಯ ಡಾ. ದಾದಾಪೀರ್ ನವಿಲೇಹಾಳ್, ಮಾಜಿ ಶಾಸಕರಾದ ಜಿ.ಹೆಚ್. ತಿಪ್ಪಾರೆಡ್ಡಿ, ಎಸ್.ಕೆ. ಬಸವರಾಜನ್, ಹೆಚ್.ಪಿ. ರಾಜೇಶ್, ಗಣಿ ಮಾಲಿಕ ಕೆ.ಎಸ್. ವಿನಾಯಕ, ಸರ್ವಮಂಗಳಮ್ಮ ಲಿಂ. ಹೆಚ್.ವಿ. ನಾಗೇಂದ್ರಪ್ಪ, ಶಾಂತಕುಮಾರಿ ಶಶಿಧರ್, ಎಂ.ಟಿ. ಮಲ್ಲಿಕಾರ್ಜುನಸ್ವಾಮಿ, ಐ.ಎಂ. ಓಂಕಾರಮ್ಮ, ಶ. ಮಂಜುನಾಥ್, ಫಾ. ಸಿಲ್ವೆಸ್ಟರ್ ಸಿರೇರಾ ಭಾಗವಹಿಸಲಿದ್ದಾರೆ.

## ಬಿಜೆಪಿ ವರಿಷ್ಠರ ದಂಡು

(1ನೇ ಪುಟದಿಂದ) ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಅಮಿತ್ ಷಾ, ಯೋಗಿ ಆದಿತ್ಯನಾಥ್ ಭಾಗವಹಿಸುವ ಸಮಾವೇಶಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪಾಲ್ಗೊಳ್ಳಲಿದ್ದಾರೆ.

ಕೆಲವು ಆಯ್ದ ಕ್ಷೇತ್ರಗಳಲ್ಲಿ ದೇವೇಗೌಡರು ಹಾಗೂ ಯಡಿಯೂರಪ್ಪ ಜಂಟಿಯಾಗಿ ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ.

ಇದಲ್ಲದೆ, ಯಡಿಯೂರಪ್ಪ-ಕುಮಾರಸ್ವಾಮಿ, ಮತ್ತೆ ಕೆಲವೆಡೆ ಬಿ.ವೈ.ವಿಜಯೇಂದ್ರ-ಕುಮಾರಸ್ವಾಮಿ ಜಂಟಿಯಾಗಿ ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ.

ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವುದಕ್ಕೂ ಮುನ್ನವೇ ವಿಜಯೇಂದ್ರ ಮತ್ತು ಕುಮಾರಸ್ವಾಮಿ ಅವರು ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಸಭೆಗಳನ್ನು ನಡೆಸುವಂತೆ ವರಿಷ್ಠರು ಸೂಚಿಸಿದ್ದು, ಅದರಂತೆ ನಿನ್ನೆಯಿಂದಲೇ ಈ ಪ್ರಕ್ರಿಯೆ ಆರಂಭಗೊಂಡಿದೆ.

## ಸಿದ್ಧಗಂಗಾ ವಿದ್ಯಾಸಂಸ್ಥೆಯಿಂದ ಏ.7ರಂದು ಕ್ವಿಜ್

ದಾವಣಗೆರೆ, ಮಾ. 28- ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಸ್ಥಾಪಕ ಎಂ.ಎಸ್. ಶಿವಣ್ಣನವರ ಗೌರವಾರ್ಥ ಏಪ್ರಿಲ್ 7ರಂದು ನಗರದ ಸಿದ್ಧಗಂಗಾ ಶಾಲೆಯಲ್ಲಿ ರಾಜ್ಯ ಮಟ್ಟದ 'ಎಂಎಸ್‌ಎಸ್-2024 ಕ್ವಿಜ್' ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿ'ಸೌಜ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಈ ಬಾರಿ ಎಸ್ಸೆಸ್ಸೆಲ್ಸಿ ಮತ್ತು ಎಸ್‌ಎಸ್‌ಸಿ ಪರೀಕ್ಷೆ ಬರೆದಿರುವ ಮಕ್ಕಳು ಈ ಕ್ವಿಜ್ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಲಿಖಿತ ಕ್ವಿಜ್‌ನಲ್ಲಿ 10ನೇ ತರಗತಿ ವಿಜ್ಞಾನ ಮತ್ತು ಗಣಿತ ಎನ್‌ಸಿಇಆರ್‌ಟಿ ಪಠ್ಯ ಪುಸ್ತಕ ಆಧಾರಿತ ಬಹು ಆಯ್ಕೆಯ 60 ಪ್ರಶ್ನೆಗಳಿರಲಿವೆ ಎಂದರು.

ಸಂಸ್ಥೆಯ ನಿರ್ದೇಶಕ ಡಾ.ಡಿ.ಎಸ್. ಜಯಂತ್ ಮಾತನಾಡಿ, ಈಗಾಗಲೇ ಮೂರು ಸಾವಿರ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. 80730-54295 ವಾಟ್ಸ್ ಆಪ್ ನಂಬರ್‌ಗೆ ಸಂಪರ್ಕಿಸಿ ನೋಂದಾಯಿಸಿಕೊಳ್ಳಬೇಕು.

ವಿಜೇತರಿಗೆ 25 ಸಾವಿರ ರೂ. ಪ್ರಥಮ, 15 ಸಾವಿರ ರೂ. ದ್ವಿತೀಯ, 10 ಸಾವಿರ ರೂ. ತೃತೀಯ ಬಹುಮಾನ ನೀಡಲಾಗುವುದು. 10 ವಿದ್ಯಾರ್ಥಿಗಳಿಗೆ ತಲಾ ಒಂದು ಸಾವಿರ ರೂ. ಸಮಾಧಾನಕರ ಬಹುಮಾನ ಹಾಗೂ 100 ಮಕ್ಕಳಿಗೆ ಎಂಎಸ್‌ಎಸ್ ಕ್ವಿಜ್ ಮೆಡಲ್ ನೀಡಲಾಗುವುದು. ನಗದು ಬಹುಮಾನ ಪಡೆಯುವ ಮಕ್ಕಳಿಗೆ ನಮ್ಮ ಕಾಲೇಜಿನಲ್ಲಿಯೇ ಎರಡು ವರ್ಷ ಪಿಯುಸಿ ಶಿಕ್ಷಣ ಉಚಿತವಾಗಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಿ. ಎಸ್. ಹೇಮಂತ್, ಪ್ರಾಚಾರ್ಯೆ ಗಾಯತ್ರಿ ಚಿಮ್ಮಡ್, ಹಿರಿಯ ವಿದ್ಯಾರ್ಥಿಗಳಾದ ಹರ್ಷ, ಮನೋಹರ್ ಉಪಸ್ಥಿತರಿದ್ದರು.

### ಜಗಳೂರು ತಾ. ದೊಣೆಹಳ್ಳಿ ದಾಸೋಹ ಸಂಸ್ಕೃತಿ ಉತ್ಸವದಲ್ಲಿ ಆರೋಗ್ಯ ತಪಾಸಣೆ

## ಐದು ನೂರಕ್ಕೂ ಹೆಚ್ಚು ಜನರಿಗೆ ಔಷಧೋಪಚಾರ



ಜಗಳೂರು, ಮಾ. 28- ತಾಲ್ಲೂಕಿನ ದೊಣೆಹಳ್ಳಿ ಶ್ರೀ ಶರಣ ಬಸವೇಶ್ವರ ದಾಸೋಹ ಮಠದಲ್ಲಿ ನಡೆಯುತ್ತಿರುವ ದಾಸೋಹ ಸಂಸ್ಕೃತಿ ಉತ್ಸವದಲ್ಲಿ ಇಂದು ಬೃಹತ್ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ನೆರವೇರಿತು. ಐದು ನೂರಕ್ಕೂ ಹೆಚ್ಚು ಜನರು ವಿವಿಧ ಜಾಢ್ಯಗಳ ಪರೀಕ್ಷೆಗಳಿಗೊಳಪಟ್ಟು ಔಷಧೋಪಚಾರವನ್ನು ಪಡೆದುಕೊಂಡರು.

ದಾವಣಗೆರೆ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ವೈದ್ಯರು, ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರ ತಂಡ, ಜಗಳೂರು ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ವೈದ್ಯರು, ಜಿಲ್ಲಾ ದಂತ ವೈದ್ಯರು ಕೋಶದ ತಜ್ಞ ವೈದ್ಯರು ಬೆಳಿಗ್ಗೆ ಯಿಂದ ಸಂಜೆಯವರೆಗೆ ತಪಾಸಣಾ ಶಿಬಿರವನ್ನು ನಡೆಸಿಕೊಟ್ಟರು.

ತಪಾಸಣೆಗೂ ಮುನ್ನ ಸಮಾವೇಶ ಉದ್ಘಾಟಿಸಿದ ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ ಅವರು, ಮಠದ ವ್ಯವಸ್ಥೆಯೊಂದು ಜನ ಸಾಮಾನ್ಯರ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಇಂತಹ ಸಮಾವೇಶ ನಡೆಸುತ್ತಿರುವುದು ಶ್ಲಾಘನೀಯ ಸಂಗತಿ. ತಪಾಸಣಾ ಶಿಬಿರಗಳ ಜೊತೆಗೆ ಆರೋಗ್ಯ ಜಾಗೃತಿಯಂತಹ ಉಪನ್ಯಾಸಗಳನ್ನು ಏರ್ಪಡಿಸುವುದು ಇಂದಿನ ಅಗತ್ಯವಾಗಿದೆ ಎಂದರು.

ಹಳ್ಳಿಗಾಡಿನ ಬಹುತೇಕರಲ್ಲಿ ಹೃದಯ ಸಮಸ್ಯೆ ಮತ್ತು ಕ್ಯಾನ್ಸರ್‌ನಂತಹ ಜಾಢ್ಯಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಹದಿ ವಯಸ್ಸಿನ ಯುವಕರು ಹೆಚ್ಚಾಗಿ ಹೃದಯ ಸ್ತಂಭನದಂತಹ ಕಾಯಿಲೆಯಗಳಿಗೆ ಬಲಿಯಾಗುತ್ತಿದ್ದಾರೆ. ಇದಕ್ಕೆ ಜೀವನ ಶೈಲಿಯ ಅವ್ಯವಸ್ಥೆಯೇ ಮುಖ್ಯ ಕಾರಣ. ದುಶ್ಚಟಗಳು ಮತ್ತು ನಿತ್ಯದ ಆಹಾರ ಸೇವನೆಯಲ್ಲಿ ಆಗುತ್ತಿರುವ ವ್ಯತ್ಯಯಗಳು ಪ್ರಮುಖ ಕಾರಣ ಎಂದು ಆತಂಕ ವ್ಯಕ್ತಪಡಿಸಿದರು.

ಜನರು ಸಂಸ್ಕಾರಯುತ ಜೀವನ ಶೈಲಿಯನ್ನು ಚಾಚೂ ತಪ್ಪದೇ ಪಾಲಿಸಿದರೆ, ಯಾವುದೇ ಕಾಯಿಲೆಗಳಿಗೆ ತುತ್ತಾಗುವುದಿಲ್ಲ. ಹೀಗಾಗಿ ಸಂಸ್ಕರಿಸಿದ ಆಹಾರಗಳನ್ನು ತ್ಯಜಿಸಿ, ಸರಳ ಆಹಾರವನ್ನು ಜೀವನ ಧರ್ಮವನ್ನಾಗಿಸಿಕೊಂಡರೆ ಆಯುಷ್ಯ ಪೂರ್ಣ ಬದುಕ ಬಹುದು ಎಂದು ಮುಖ್ಯ ಅತಿಥಿಯಾಗಿ ಮಾತನಾಡಿದ ಬೆಂಗಳೂರಿನ ಹೆಸರಾಂತ ದಂತವೈದ್ಯ ಡಾ. ಪ್ರಫುಲ್ಲಾ ತುಮಾಟಿ ಭರವಸೆ ವ್ಯಕಪಡಿಸಿದರು.

ಬೆಂಗಳೂರು ಎಂ.ಎಸ್. ರಾಮಯ್ಯ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ವೈದ್ಯ ಡಾ. ಇಬ್ರಾಹಿಂ ನಾಗನೂರ್ , ದಾವಣಗೆರೆ ಹೆಸರಾಂತ ದಂತ ವೈದ್ಯ ಡಾ. ಹಾಲಸ್ವಾಮಿ ಕಂಬಾಳಿಮಠ ಮಾತನಾಡಿದರು. ಇದೇ ವೈದ್ಯರ ತಂಡ ತಪಾಸಣೆಯ ನೇತೃತ್ವವನ್ನು ವಹಿಸಿತ್ತು.

ಮುಖ್ಯ ಅತಿಥಿಗಳಾದ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕೆ.ಪಿ. ಪಾಲಯ್ಯ, ಹೆಚ್. ರೇವಣ್ಣ, ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಗಡಿ ಮಾಕುಂಟೆ ಶಿವಕುಮಾರ್, ಮಾಜಿ ಸದಸ್ಯ ಟಿ. ಬಸವರಾಜ್, ಬೀಜ ನಿಗಮದ ನಿರ್ದೇಶಕ ರಾಜೇಂದ್ರ ಪ್ರಸಾದ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಆರ್. ವೀರೇಶ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ದೊಣೆಹಳ್ಳಿ ಗ್ರಾಮದವರೇ ಆದ ಪ್ರತಿಭಾನ್ವಿತ ಯುವ ವೈದ್ಯರಾದ ಡಾ.ಎ.ಟಿ. ರಾಕೇಶ್ ಮತ್ತು ಡಾ.ಹೆಚ್.ಜೆ. ಪ್ರಭು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಕೂಡ್ಲಿಗಿ ಶಾಸಕರೂ, ನೇತ್ರ ತಜ್ಞ ಡಾ. ಎನ್. ಟಿ. ಶ್ರೀನಿವಾಸ್ ಅವರು ಸಮಾವೇಶಗೊಂಡಿದ್ದ ವೈದ್ಯರ ತಂಡದೊಂದಿಗೆ ತಪಾಸಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಅವರೊಂದಿಗೆ ದಾಸೋಹ ಸಂಸ್ಕೃತಿ ಉತ್ಸವದ ಮುಖ್ಯ ಸಂಚಾಲಕರಾದ ದೊಣೆಹಳ್ಳಿ ಗುರುಮೂರ್ತಿ, ಕಾನಾಮಡುಗು ದಾಸೋಹ ಮಠದ ಐಮುಡಿ ಶರಣಾರ್ಯರು ಔಷಧಿ ವಿತರಣೆ, ಆಹಾರ, ನೀರು ಪೂರೈಕೆ ಮೂಲಕ ಇಡೀ ದಿನ ಶ್ರಮಿಸಿದರು. ಇವರೊಂದಿಗೆ ಗ್ರಾಮಸ್ಥರು ಮತ್ತು ಶರಣಶ್ರೀ ವಿದ್ಯಾಲಯದ ಮುಖ್ಯ ಶಿಕ್ಷಕಿ ಆಶಾ ಮತ್ತವರ ತಂಡ ಶಿಬಿರದ ಯಶಸ್ಸಿಗೆ ಶ್ರಮಿಸಿದತು.

## ವಚನ ಸಾಹಿತ್ಯದ ಮೂಲಕ ಶರಣರು ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು

### ಕುರ್ಕಿ ಗ್ರಾಮದಲ್ಲಿನ ಕಾರ್ಯಕ್ರಮದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯಪ್ಪ




ದಾವಣಗೆರೆ, ಮಾ. 28- 12ನೇ ಶತಮಾನದಲ್ಲಿ ವಚನ ಸಾಹಿತ್ಯ ಬೆಳೆದು ಬಂದಿದ್ದು, ವಚನ ಸಾಹಿತ್ಯದ ಮೂಲಕ ಹಲವಾರು ಶರಣರು ಜಾತಿ ವ್ಯವಸ್ಥೆಯನ್ನು ಕಿತ್ತೆಸೆದು ಸಮ ಸಮಾಜ ನಿರ್ಮಾಣ ಮಾಡುವುದಕ್ಕೆ ಶ್ರಮಿಸಿದರು ಎಂದು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ತಿಳಿಸಿದರು.

ಇಲ್ಲಿಗೆ ಸಮೀಪದ ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಹಾಗೂ ದತ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ವಚನ ಸಾಹಿತ್ಯ ಕುರಿತಾಗಿ ಅವರು ಉಪನ್ಯಾಸ ನೀಡಿದರು.

ಮಕ್ಕಳಿಗೆ ಪರೀಕ್ಷಾ ಸಿದ್ಧತೆಯನ್ನು ಕುರಿತಾಗಿ ಮಾತನಾಡುತ್ತಾ, ಮಕ್ಕಳೇ ಇಷ್ಟಪಟ್ಟು ಓದಿ ಕಷ್ಟ ಪಟ್ಟು ಓದಬೇಡಿ, ನೀವು ದೊಡ್ಡ ದೊಡ್ಡ ಕನಸು ಗಳನ್ನು ಕಾಣಿ, ಆ ಕನಸುಗಳು ನಿಮ್ಮ ಗುರಿಯನ್ನು ತಲುಪುವಂತೆ, ನಿಮ್ಮನ್ನು ಪ್ರೇರೇಪಿಸುವಂತೆ ಇರಬೇಕು. ಪರೀಕ್ಷೆಗೆ ಭಯ ಪಡಬೇಡಿ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಆಗ ಯಶಸ್ಸು ಸಾಧ್ಯ ಎಂದು ತಿಳಿಸಿದರು. ಹಾಗೆ ಓದಿನಲ್ಲಿ ಏಕಾಗ್ರತೆ ಬಹಳ ಮುಖ್ಯ. ಅದನ್ನು ಬೆಳೆಸಿಕೊಳ್ಳಿ ಓದಿನಲ್ಲಿ ನಿರಂತರತೆ ಇರಲಿ, ಓದಿದ್ದನ್ನು ಮನನ ಮಾಡಿಕೊಂಡು ಬರೆಯಬೇಕು. ದೈನಂದಿನ ಪಾಠವನ್ನು ಅಂದೇ ಅಭ್ಯಸಿಸಿದರೆ ಪರೀಕ್ಷೆಗೆ ಯಾವ ಭಯವೂ ಇರಲಾರದು ಎಂದು ತಿಳಿಸಿದರು.

ದತ್ತಿ ದಾನಿ ಕೆ.ಜಿ. ವೇದಮೂರ್ತಿ ಗೌಡ್ರು ಕುರ್ಕಿ ಮಾತನಾಡಿ, ಮಕ್ಕಳು ಕೀಳರಿಮೆ ಬೆಳೆಸಿಕೊಳ್ಳಬಾರದು. ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಬೇಕು. ಯಾರೂ ಹುಟ್ಟುತ್ತಲೇ ದೊಡ್ಡವರಾಗುವುದಿಲ್ಲ. ಆದ್ದರಿಂದ ನೀವು ವಿದ್ಯೆ ಮತ್ತು ಶ್ರಮದಿಂದ ಬೆಳೆಯಬೇಕು ಎಂದು ಮಕ್ಕಳಿಗೆ ಕರೆ ನೀಡಿದರು.

ಕುರ್ಕಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ.ಬಿ. ಮೀರಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ 2022- 23ನೇ ಸಾಲಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೊಡ ಮಾಡುವ ಗ್ರಾಮೀಣ ಸಿರಿ ಪ್ರಶಸ್ತಿಯನ್ನು ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ಗ್ರಾಮೀಣ ಸಾಧಕಿ ಶ್ರೀಮತಿ ಬಿ.ಎಂ.ಪರಿಮಳ ಅಜ್ಜಯ್ಯ ಕುರ್ಕಿ ಅವರನ್ನು ಅಭಿನಂದಿಸಿ, ಗೌರವಿಸಲಾಯಿತು.

ಶೈಕ್ಷಣಿಕ ಕ್ಷೇತ್ರದಲ್ಲಿ ಸುದೀರ್ಘ ಸೇವೆಯನ್ನು ಸಲ್ಲಿಸಿದ ಹಿರಿಯರಾದ ಕೆ.ಜಿ ಸಿದ್ದಪ್ಪ ಕುರ್ಕಿ ನಿವೃತ್ತ ಶಿಕ್ಷಣ ಸಂಯೋಜಕರು ಅವರನ್ನೂ ಅಭಿನಂದಿಸಿ ಗೌರವಿಸಲಾಯಿತು.

ದಾವಣಗೆರೆ ತಾಲ್ಲೂಕು ಕಸಾಪ ನಿರ್ದೇಶಕರಾದ ಶ್ರೀಮತಿ ಬಿ.ವಿ. ಪರಿಮಳ ಜಗದೀಶ್ ಗ್ರಾಮೀಣ ಸಿರಿ ಪ್ರಶಸ್ತಿ ಪುರಸ್ಕೃತ ಬಿ. ಎಮ್. ಪರಿಮಳ ಇವರ ಸಾಧನೆ ಕುರಿತಾಗಿ ಮಾತನಾಡಿದರು.

ಮತ್ತೋರ್ವ ನಿರ್ದೇಶಕ ಎಂ. ಷಡಾಕ್ಷರಪ್ಪ ಬೇತೂರು ಪ್ರಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಕಸಾಪ ನಿರ್ದೇಶಕ ಎ.ಎಂ. ಸಿದ್ದೇಶ್, ಆಜೀವ ಸದಸ್ಯರಾದ ಕಳಸಪ್ಪ, ವರ್ಷ ಬೇಕರಿ ಸಿದ್ದೇಶ್, ಎಸ್. ಪಾರ್ವತಮ್ಮ, ಎ.ಆರ್. ರಾಘವೇಂದ್ರ, ಪ್ರಕಾಶ್ ಆರ್, ಎಂ. ನಾಗರಾಜ್ ಉಪಸ್ಥಿತರಿದ್ದರು.


ವಿದ್ಯಾರ್ಥಿನಿ ಹನುಮಕ್ಕ ಪ್ರಾರ್ಥಿಸಿದರು. ಎಸ್. ಪಾರ್ವತಮ್ಮ ನಿರೂಪಿಸಿದರು. ಎಚ್. ವಿರೂಪಾಕ್ಷಿ ಸ್ವಾಗತಿಸಿದರು. ಸಿ.ಜಿ. ಜಗದೀಶ್ ಕೂಲಂಬಿ ವಂದಿಸಿದರು.



## ರೆಡ್ ಕ್ರಾಸ್‌ನಿಂದ ರಕ್ತದಾನ ಶಿಬಿರ

ದಾವಣಗೆರೆ, ಮಾ. 28 - ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ದುರ್ಗಾಂಬಿಕಾ ದೇವಿ ಟ್ರಸ್ಟ್ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಇವರುಗಳ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ನಡೆಸಲಾಯಿತು.

ಶಿಬಿರದಲ್ಲಿ ರೆಡ್ ಕ್ರಾಸ್ ಸಂಸ್ಥೆ ದಾವಣಗೆರೆಯ ಸಭಾಪತಿ ಡಾ. ಎ.ಎಂ. ಶಿವಕುಮಾರ್ ನೇತೃತ್ವದಲ್ಲಿ, ಗೌರವ ಸಭಾಪತಿ ಗೌಡರ ಚನ್ನಬಸಪ್ಪ, ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ, ನಿರ್ದೇಶಕ ಟಿ. ಕರಿಬಸಪ್ಪ, ಡಿ.ಎನ್. ಶಿವಾನಂದ್, ಎ.ಜೆ. ರವಿಕುಮಾರ್, ಕೆ.ಕೆ. ನಾಗರಾಜ್, ಧರ್ಮೇಗೌಡ, ವೈದ್ಯಾಧಿಕಾರಿ ಡಾ. ಪಿ.ಕೆ. ಬಸವರಾಜ್, ಸಂಚಾಲಕರು ಮತ್ತು ಆಪ್ತ ಸಮಾಲೋಚಕ ಎನ್.ಜಿ. ಶಿವಕುಮಾರ, ಪ್ರಯೋಗಶಾಲಾ ಮೇಲ್ವಿಚಾರಕ ಆರ್. ವಿನಾಯಕ, ಪ್ರಯೋಗಶಾಲಾ ತಂತ್ರಜ್ಞ ಗಿರೀಶ್, ಅಟೆಂಡರ್ ಪದ್ಮಬಾಯಿ, ಕೊಟ್ರೇಶ್ ಇತರರು ಹಾಜರಿದ್ದರು.



## ಹೃದಯಾಘಾತದಿಂದ ಅನ್ಸಾರಿ ನಿಧನ

ಲಖ್ನೌ, ಮಾ. 28 – ಜೈಲಿನಲ್ಲಿದ್ದ ಭೂಗತ ಮಾಫಿಯಾ ಮುಕ್ತಾರ್ ಅನ್ಸಾರಿ ಹೃದಯಾಘಾತದಿಂದ ನಿಧನವಾಗಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಮೌ ಸದರ್ ಕ್ಷೇತ್ರದಿಂದ ಐದು ಬಾರಿ ಶಾಸಕ ಸ್ಥಾನಕ್ಕೆ ಆಯ್ಕೆಯಾಗಿದ್ದ ಅನ್ಸಾರಿ, 2005ರಿಂದ ಜೈಲು ಪಾಲಾಗಿದ್ದ. ಅನ್ಸಾರಿ ವಿರುದ್ಧ 65 ಅಪರಾಧಿಕ ಪ್ರಕರಣಗಳು ಬಾಕಿ ಇದ್ದವು. ಸೆಪ್ಟೆಂಬರ್ 2022ರ ನಂತರ ಎಂಟು ಪ್ರಕರಣದಲ್ಲಿ ಆತನಿಗೆ ಶಿಕ್ಷೆಯಾಗಿದೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :
ಹೆಚ್. ಶ್ರೀಧರ್, ಪವನ್ ಇಂಜಿನಿಯರಿಂಗ್ ವರ್ಕ್ಸ್, ದಾವಣಗೆರೆ. ಇವರುಗಳ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ**
ಪಿ.ಬಿ. ರೋಡಿಗೆ ಹತ್ತಿರ, ಸಿತಾರಾ ಬಾರ್ ಹಿಂಭಾಗ 10x20, 10x20 East ಎರಡು ಮಳಿಗೆಗಳು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜಾಗ, ನೆಲ ಬಾಡಿಗೆಗೆ**
ಶಾಮನೂರು ಹತ್ತಿರ ಸರ್ವೀಸ್ ರೋಡಿಗೆ ಹತ್ತಿರ Top In Town Hotel ಹತ್ತಿರ 26 ಸಾವಿರ ಅಡಿ ಜಾಗ, ನೆಲ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ :
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಪ್ರಾಪರ್ಟಿ ಹಬ್**
ಈ ಸಿ
ಈ - ಸ್ವತ್ತು
ಕಟ್ಟಡ ಲೈಸನ್ಸ್
ಖಾತೆ ಬದಲಾವಣೆ
96118 66449

**ಮನೆ ಬಾಡಿಗೆಗೆ ಇದೆ**
3BHK ಮಹಡಿ
ಎಂ.ಸಿ.ಸಿ., ಬಿ ಬ್ಲಾಕ್, ನಂ. 3044/2B, 8ನೇ ಮೇನ್, 2ನೇ ಕ್ರಾಸ್ ಮತ್ತು 3ನೇ ಕ್ರಾಸ್ ಮಧ್ಯೆ ಇರುವ ಮನೆ ಬಾಡಿಗೆಗೆ ಇದೆ.
99806 95555, 99019 55646

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80, 50x80 North ಅಕ್ಕ-ಪಕ್ಕ, 40x60, 40x60 South ಅಕ್ಕ-ಪಕ್ಕ, 50x80 East, 30x50 North. 120 ಅಡಿ ರೋಡಿಗೆ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
1) ಹಳೇ ಬನಶಂಕರಿ ಲೇಔಟ್‌ನಲ್ಲಿ 30x40 East,
2) ಅಥಣಿ ಕಾಲೇಜ್ ಹತ್ತಿರ 30x44 North.
3) ಬನಶ್ರೀ ಲೇಔಟ್‌ನಲ್ಲಿ 100 ಅಡಿ ರೋಡಿಗೆ ಹತ್ತಿರ 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಕೆಲಸಕ್ಕೆ ಬೇಕಾಗಿದ್ದಾರೆ**
ತರಳಬಾಳು ಬಡಾವಣೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕ್ಲಿನಿಕ್‌ಗೆ
ರಿಸೆಪ್ಷನಿಸ್ಟ್ - 1
(ಬಿ.ಕಾಂ. ಪದವಿ ಅರ್ಹತೆ)
ಫೋನ್ : 86186 42929
08192-252228

**ಗೋಡೌನ್ ಬಾಡಿಗೆಗೆ ಇದೆ**
ಶಿವ-ಪಾರ್ವತಿ ಬಡಾವಣೆ 5ನೇ ಮೇನ್, 5ನೇ ಕ್ರಾಸ್ ಪೂರ್ವ 2600 sq.ft (40 ಅಡಿ ರೋಡ್) ಬಾಡಿಗೆಗೆ ಇದೆ. ವಿಚಾರಿಸಿ
ಶಾಮನೂರು ವಿಜಯಕುಮಾರ್
95386 66369

**ನುರಿತ ಅನುಭವವುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.A, B.Ed, MA, B.Sc, M.Sc, M.Ed, NTC ಆಯಾ ಕೆಲಸಕ್ಕೆ ಬೇಕಾಗಿದ್ದಾರೆ.
Little champs Gurukulam
Near HKR Circle, College Road, Nittuvalii Davanagere.
90609 06039, 98443 32559

**WANTED**
Female trainer for reputed veta spoken English centre.
contact with resume.,
97313 57714
98450 40493

**ಬೋರ್ ವೆಲ್ ಪಾಯಿಂಟ್**
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ.
97436 54365, 86609 98651

**ನೀರಿನ ಟ್ಯಾಂಕರ್ ಬಾಡಿಗೆಗೆ ಇದೆ**
ಸುಮಾರು 6000 ಲೀ ಸಾಮರ್ಥ್ಯದ ಉತ್ತಮ ಕಂಡೀಷನಲ್ಲಿರವ ನೀರಿನ ಟ್ಯಾಂಕರ್ ಬಾಡಿಗೆಗೆ ಕೊಡುವುದಿದೆ ವಿಚಾರಿಸಿ.
99869 13794

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

**ಕೆಲಸಕ್ಕೆ ಬೇಕಾಗಿದ್ದಾರೆ**
PUC/ITI/ Deploma/Degree
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್
ಹೋಲ್‌ಸೇಲ್ ಸಿಮೆಂಟ್ ವ್ಯಾಪಾರಿಗಳು, ರಿಂಗ್ ರೋಡ್, ಎಸ್‌ಎಸ್ ಲೇಔಟ್, ದಾವಣಗೆರೆ.
99457 49925, 99807 53632

**ಕೆಲಸಕ್ಕೆ ಬೇಕಾಗಿದ್ದಾರೆ**
ಲೇಡಿಸ್ ಟೈಲರ್ಸ್ & ಹೆಲ್ಪರ್ಸ್
ನೋಬೆಲ್ ಟಾರ್ಪಾಲಿನ್ ಕಂಪನಿ
ಆರ್.ಹೆಚ್. ಬಿಲ್ಡಿಂಗ್, ಪಿಬಿ ರೋಡ್, ದಾವಣಗೆರೆ.
99860 19796

**WANTED**
ACCOUNTANTS - 5
(3-5 years Experience in Tally)
Shamanur Pharma & Health Care Pvt. Ltd.,
374, 4th main, PJ Extensions, Davangere.
98441 20003

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ ಮತ್ತು ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೋಂ ನರ್ಸಿಂಗ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ವಿದ್ಯಾರ್ಹತೆ : 7th, 10th, PUC, ANM, GNM
91486 83185

**ಮನೆ ಬಾಡಿಗೆಗೆ ಇದೆ**
1ನೇ ಮೇನ್, 15ನೇ ಕ್ರಾಸ್, ವಿನೋಬನಗರ 1 ಬಿಹೆಚ್‌ಕೆ / 1 ಬೆಡ್ ರೂಂ, ಮುನ್ಸಿಪಲ್ ಹಾಗೂ ಬೋರ್ ನೀರಿನ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ.
83293 91817

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟು ಮಾರಾಟಕ್ಕಿದೆ**
KHB ಲೇಔಟ್‌ನಲ್ಲಿ 50x80 ಪಶ್ಚಿಮ ಹಾಗೂ ಡಾಲರ್ಸ್ ಕಾಲೋನಿಯಲ್ಲಿ (ಎರಡು 30x40 ಸೈಟು ಸೇರಿ ಒಟ್ಟು 3060 Sq.ft ಇರುವ) ಈಶಾನ್ಯ ಬೆಳೆದಿರುವ ದಕ್ಷಿಣ ಪಶ್ಚಿಮ ದಿಕ್ಕಿನ ಕಾರ್ನರ್ ಸೈಟ್ ಮಾರಾಟಕ್ಕಿರುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ನೇರವಾಗಿ ಸೈಟ್ ಓನರ್‌ಗೆ ಸಂಪರ್ಕಿಸಿ.
63621 81509

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಮನೆ ಲೀಸ್ ಗಿದೆ**
ದೇವರಾಜ್ ಅರಸ್ ಬಡಾವಣೆ, ಶಿವ-ಪಾರ್ವತಿ ಕಲ್ಯಾಣ ಮಂಟಪ ಸಮೀಪ 2ನೇ ಮಹಡಿಯಲ್ಲಿ ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ಸೌಕರ್ಯವಿರುವ ಸುಸಜ್ಜಿತ 2BHK ಮನೆ ಲೀಸ್ ಗಿದೆ.
76187 94615

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 13.05.2024 ರಿಂದ 21.05.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ ಪ್ರವಾಸ ವಿಮಾನದಲ್ಲಿ ಪ್ರಯಾಣ ಆಸಕ್ತಿ ಇರುವವರು ಕರೆ ಮಾಡಿ :
94485 33928, 90086 26473

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ.
30x40,30x50,40x60
98441 24217
98458 61220

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮನ್, ಸೇಲ್ಸ್ ಗರ್ಲ್ಸ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 01

**TO-LET / LEASE**
WELL Furnshied House for Domestic, Commercial 3 BHK, Big Hall Varanda, Kitchen, Pooja Store, Bathroom in 1st Floor, 13th Main, BIET Road, #1646/31, Opp. Dvg-Harihara Urban Bank and 13 feet width 26 feet Length hall to Let for D/C 7th cross, Kuvempu Nagar 1st Building
98444 99799

**ಬೇಕಾಗಿದ್ದಾರೆ**
ಸೆಕ್ಯೂರಿಟಿಗಳು ಶಾಲಾ-ಕಾಲೇಜಿಗಳಿಗೆ ಮತ್ತು ಆಫೀಸ್‌ಗಳಿಗೆ ಬೇಕಾಗಿದ್ದಾರೆ.
99022 17511

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್ ಕರೂರು ಇಂಡಸ್ಟ್ರಿಯಲ್ ಏರಿಯಾ ದಾವಣಗೆರೆ. ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ : 13000 ತಿಂಗಳಿಗೆ ಕೊಡುತ್ತೇವೆ.
94829 91495, 99018 69371

**ಕಾರ್ ಬಾಡಿಗೆಗೆ**
ಕಾರು ಬಾಡಿಗೆಗೆ ಇದೆ.
ಸಂಪರ್ಕಿಸಿ
97436 54365
86609 98651

**ಬಾಡಿಗೆಗೆ / ಲೀಸ್‌ಗೆ ಇದೆ**
ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ (ಬ್ರಿಕ್ಸ್) ಬಾಡಿಗೆ ಅಥವಾ ಲೀಸ್‌ಗೆ ಕೊಡಲಾಗುವುದು.
ಮಲೇಬೆನ್ನೂರು ರಸ್ತೆ, ಜರೀಕಟ್ಟೆ ದಾವಣಗೆರೆ ತಾ. ಜಿ.
99017 74089

**SHOP FOR RENT**
12'x12', Mamas Joint Road, Mishra Peda Building, MCC B Block, Davangere.
98440 64565

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಶಿಕ್ಷಕಿ/ಶಿಕ್ಷಕರು ಬೇಕಾಗಿದ್ದಾರೆ**
D.Ed.-04, B.Ed/MA English-02, Social-02, BA.B.Ed./MA Kannada-02, B.Sc., B.Ed, PCM-02, CBZ-02, B.Com/BCA-01,
ಸಂಪರ್ಕಿಸಿ : SMS ಕಾನ್ವೆಂಟ್,
ರಾಜೀವ್‌ಗಾಂಧಿ ಬಡಾವಣೆ, RTO ಕಚೇರಿ ಹತ್ತಿರ, ದಾವಣಗೆರೆ.
9844735946, 9663195531


**SPOKEN ENGLISH**
* Grammar & Vocabulary
* Writing Skills
* Pronounciation
* Story Telling
* Public Speaking
Call : 98442 39618

**ಬೇಸಿಗೆ ಶಿಬಿರ**
ಶಾಲಾ ಮಕ್ಕಳಿಗಾಗಿ
ಸ್ಪೋಕನ್ ಇಂಗ್ಲಿಷ್, ಕಂಪ್ಯೂಟರ್ ಕ್ಲಾಸಸ್, ನವೋದಯ ಕೋಚಿಂಗ್.
ವಿಕಾಸ್ ಅಕಾಡೆಮಿ, ದಾವಣಗೆರೆ.
93804 29199

**OT ಟೆಕ್ನಿಷಿಯನ್ ಬೇಕಾಗಿದ್ದಾರೆ**
ಆಸ್ಪತ್ರೆ ಅಪರೇಷನ್ ಥೀಯೇಟರ್ ಕೆಲಸ ಮಾಡಲು ಅನುಭವವುಳ್ಳ OT ಟೆಕ್ನೀಷಿಯನ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು.
99725 23910

**ಮಾರಾಟಕ್ಕಿದೆ**
ಒಳ್ಳೆಯ ಕಂಡೀಷನಲ್ಲಿ ಇರುವ ಪೆಪ್ಸಿ ಸೀಲಿಂಗ್ ಮೆಷಿನ್ ಮಾರಾಟಕ್ಕಿದೆ. ಸಂಪರ್ಕಿಸಿ :
78926 28916

**WANTED LECTURES**
BE & M.tech
BSC & MSC
88614 45913

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಐ. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟ್‌ಗಳು ಮಾರಾಟಕ್ಕಿವೆ**
* ಸೈಟ್ ನಂ. 127 - 1200 sqft
* ಸೈಟ್ ನಂ. 263 - 11000 sqft
* ಸೈಟ್ ನಂ. 262 - 2250 sqft ಕಾರ್ನರ್ ಫ್ಲಾಟ್
ಎನ್‌ಆರ್ ಲೇಕ್ ಸಿಟಿ
ಪಿ.ಬಿ. ರಸ್ತೆ, ದಾವಣಗೆರೆ.
ಸಂಪರ್ಕಿಸಿ : ನಿತಿನ್ ರೆಡ್ಡಿ
98454 54774
nitin@nrgroupindia.com

**SCHOOL VAN FOR SALE**
Tata winger Model:2012
Good condition
Contact :
95356 10817

**FOR RENT**
Ground floor Shop 25x12, 1st floor for office/Godown, 2nd floor 35x13
12th cross, KTJ Nagar, opp. old Treasure Office, Near Vidyarthi Bhavan, Barani Hotel, Behind Dharma Hotel
9844413530, 9164555150

**WANTED**
FEMALE RECEPTIONIST
20 to 27years, Any degree, Kannada, English, Hindi, 12000 to 15000/-p.m
Timing :12pm to 9pm
Hairpoint unisex salon
MCC B block, near water tank park, Dvg.
97386 64400, 91483 19342

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**Site for sale**
in basavehwara nagara, near sapthagiri school opposite to chigateri layout, banni marada chowdamma, 3rd site no 38
East facing size 30x40
Contact direct owner Prakash Hullathi
97421 26262

**ಶ್ರೀ ಮಾತ ಪುರದಮ್ಮ ಜ್ಯೋತಿಷ್ಯಾಲಯ**
ಪ|| ಶ್ರೀರಾಮ್ ಭಟ್
ನಂ. 1 ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ.ಸ್ತೂ. ಸ್ತ್ರೀ-ಪುರುಷ ವಶೀಕರಣ ಕೇವಲ 2 ದಿನಗಳಲ್ಲಿ ಪರಿಹಾರ ಶತಸಿದ್ಧ, ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
97315 83591

# ಒಲ್ಲದ ಮನಸ್ಸಿನ ಸ್ಪರ್ಧೆಗಿಂತ ನನಗೆ ಟಿಕೆಟ್ ಕೊಡಿ



**ದಾವಣಗೆರೆಯಲ್ಲಿ ಪಾಳೇಗಾರಿಕೆ ವ್ಯವಸ್ಥೆ ಇದೆ. ಕ್ಷೇತ್ರದಲ್ಲಿ ಬೆಳೆಯುತ್ತೇವೆ ಎಂದು ಯಾರಾದರೂ ಮುಂದೆ ಬಂದಾಗ ಅಲ್ಲಿದ್ದ ಪ್ರಬಲ ಕುಟುಂಬದವರು 'ಇವರು ನಮ್ಮವರಲ್ಲ, ಇವರನ್ನು ದೂರ ಇಡಬೇಕು' ಎಂಬಂತಹ ವಾತಾವರಣ ಸೃಷ್ಟಿಸುತ್ತಾರೆ. ಜರ್ಮನಿಯಲ್ಲಿ ಯಹೂದಿಗಳಿಗೂ ಇದೇ ರೀತಿ ಮಾಡಲಾಗಿತ್ತು. ಅದೇ ರೀತಿ ದಾವಣಗೆರೆಯಲ್ಲಿಯೂ ನಡೆಯುತ್ತಿದೆ. ಇದು ಕೇವಲ ನನಗಾದ ಅವಮಾನವಲ್ಲ, ಇಡೀ ಸಮಾಜಕ್ಕೆ ಆದ ಅವಮಾನ ಎಂದು ವಿನಯ್ ಕುಮಾರ್ ಹೇಳಿದರು.**

ದಾವಣಗೆರೆ, ಮಾ. 28- ವಿನಯ್ ಕುಮಾರ್ ನಮ್ಮ ಜಿಲ್ಲೆಯವರಲ್ಲ, ಟಿಕೆಟ್ ಬೇಡ ಎಂದು ವರಿಷ್ಠರಿಗೆ ಹೇಳಿದ್ದಾಗಿ ಸಚಿವರು ಮೊನ್ನೆ ನಡೆದ ಕಾಂಗ್ರೆಸ್ ಸಭೆಯಲ್ಲಿ ಹೇಳಿದ್ದಾರೆ. ಸಚಿವರು ನನಗೆ ಸಿಗಬೇಕಾದ ಟಿಕೆಟ್ ತಪ್ಪಿಸಿದ್ದಾರೆ ಎಂದಾದರೆ, ಹಿಂದುಳಿದ ವರ್ಗಕ್ಕೆ ಸೇರಿದ ಓರ್ವ ಯುವಕ ಸಂಸದನಾಗುವುದನ್ನು ತಪ್ಪಿಸಿದಂತಾಗಿದೆ ಎಂದು ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕರೂ, ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಜಿ.ಬಿ. ವಿನಯ್ ಕುಮಾರ್ ಹೇಳಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದವರ ಧ್ವನಿಯಾಗಿ ಓರ್ವ ಯುವಕನನ್ನು ಸಂಸತ್‌ಗೆ ಕಳುಹಿಸುವ ಅವಕಾಶ ಸಚಿವರಿಗಿತ್ತು. ಈಗಲೂ ಕಾಲ ಮಿಂಚಿಲ್ಲ. ಕ್ಷೇತ್ರದಲ್ಲಿ ಶೇ. 80ರಷ್ಟಿರುವ ಹಿಂದುಳಿದ ವರ್ಗದ ಜನರ ಪ್ರೀತಿ, ವಿಶ್ವಾಸ ಹೆಚ್ಚಾಗಬೇಕಾದರೆ ನನಗೆ ಟಿಕೆಟ್ ಕೊಡಿಸಿ ಎಂದರು.

ಸೂಕ್ತ ಅಭ್ಯರ್ಥಿ ಎಂದು ತಮ್ಮ ಕುಟುಂಬಕ್ಕೆ ವರಿಷ್ಠರೇ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದಾರೆ ಎಂದೂ ಸಚಿವರು ಹೇಳಿದ್ದಾರೆ. ಹಾಗಾದರೆ ಅದು ಇಷ್ಟ ಇರದಿದ್ದರೂ ಬಂದಿರುವ ಟಿಕೆಟ್. ಹೀಗಾಗಿ ಒಲ್ಲದ ಮನಸ್ಸಿನಿಂದ ಸ್ಪರ್ಧಿಸುವ ಬದಲು ಆಸಕ್ತಿ ಇರುವ ನನಗೆ ಟಿಕೆಟ್ ಕೊಡಿಸಿ. ನಾನು ಗೆದ್ದು, ಅಭಿವೃದ್ಧಿ ಮಾಡಿ ತೋರಿಸುತ್ತೇನೆ ಎಂದರು.

ಈಗಿನ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವುದು ಕಷ್ಟ. ಹಿಂದಿನ ಬಾರಿ ಟಿಕೆಟ್ ತಪ್ಪಿರುವ ಕುರಿತು ಜನರಲ್ಲಿ ಕೋಪವಿದೆ. ಹಿಂದುಳಿದ ವರ್ಗದ ಜನರು ನೋಟಾಕ್ಕೆ ಅಥವಾ ಬಿಜೆಪಿಗೆ ಮತ ನೀಡಬಹುದು. ಆದರೆ ನಾನು ಶೇ.100ರಷ್ಟು ಗೆಲ್ಲುವ ಅಭ್ಯರ್ಥಿ. ನನಗೆ ಟಿಕೆಟ್ ತಪ್ಪಿಸಿ ಈಗ ಗೆಲ್ಲಲು ಹೋರಾಟ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿನಯ್ ಹೇಳಿದರು.

ನಾನು ಹುಟ್ಟಿದ್ದು ಬೆಳೆದಿದ್ದು ಕಕ್ಕರಗೊಳ್ಳದಲ್ಲಿಯೇ ನನ್ನ ತಂದೆ ಹಾಗೂ ತಾಯಿ ಸಂಬಂಧಿಗಳೂ ಈ ಜಿಲ್ಲೆಯಲ್ಲಿದ್ದಾರೆ. ಹೀಗಿದ್ದಾಗ ನಾನು ಹೊರ ಜಿಲ್ಲೆಯವನಾಗಲು ಹೇಗೆ ಸಾಧ್ಯ ? ಎಂದು ವಿನಯ್ ಪ್ರಶ್ನಿಸಿದರು.

**ಜನಾಭಿಪ್ರಾಯ ಸಂಗ್ರಹಿಸಿ ನಂತರ ಪಕ್ಷೇತರ ಸ್ಪರ್ಧೆ ನಿರ್ಧಾರ:** ಪಕ್ಷೇತರನಾಗಿ ಸ್ಪರ್ಧಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಸಂಚರಿಸಿ ಜನಾಭಿಪ್ರಾಯ ಕೇಳುತ್ತಿದ್ದೇನೆ. ಶೇ.90ರಷ್ಟು ಜನರು ಪಕ್ಷೇತರವಾಗಿ ಸ್ಪರ್ಧಿಸುವಂತೆ ಹೇಳುತ್ತಿದ್ದಾರೆ. ಇನ್ನೂ ಕೆಲ ವಿಧಾನಸಭಾ ಕ್ಷೇತ್ರಗಳಿಗೆ ತೆರಳಿ ಅಭಿಪ್ರಾಯ ಸಂಗ್ರಹಿಸುತ್ತೇನೆ.

ಈಗಾಗಲೇ ಹೋಗಿರುವ ಎಲ್ಲಾ ಹಳ್ಳಿಗಳಲ್ಲಿ ಜನರು ನಿನಗೆ ಅನ್ಯಾಯವಾಗಿದೆ. ಪಕ್ಷೇತರರಾಗಿ ಸ್ಪರ್ಧಿಸಿ ಎಂದೇ ಒತ್ತಾಯ ಸುತ್ತಿದ್ದಾರೆ. ಇನ್ನೂ ಕೆಲವು ಕ್ಷೇತ್ರಗಳಿಗೆ ಹೋಗಿ ಅಭಿಪ್ರಾಯ ಸಂಗ್ರಹಿಸುತ್ತೇನೆ. ಪಕ್ಷೇತರವಾಗಿ ಸ್ಪರ್ಧಿಸುವುದು ಕಷ್ಟ. ಆದಾಗ್ಯೂ ನನ್ನ ಗೆಲುವು ನಿಶ್ಚಿತ ಎಂದಾದರೆ ಪಕ್ಷೇತರವಾಗಿ ಸ್ಪರ್ಧಿಸುತ್ತೇನೆ ಎಂದು ವಿನಯ್ ಕುಮಾರ್ ಹೇಳಿದರು.

ನನ್ನ ಸ್ಪರ್ಧೆ ಪಾಳೇಗಾರಿಕೆ ಹಾಗೂ ಕುಟುಂಬ ರಾಜಕಾರಣದ ವಿರುದ್ಧವೇ ಹೊರತು, ಕಾಂಗ್ರೆಸ್ ವಿರುದ್ಧವಲ್ಲ. ಚುನಾವಣೆಯಲ್ಲಿ ಗೆದ್ದು ಮತ್ತೆ ನಾವು ಕಾಂಗ್ರೆಸ್ ಸೇರುತ್ತೇನೆ ಎಂದು ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹೇಮಂತ್ ಕುಮಾರ್, ರಂಗಸ್ವಾಮಿ, ಶರತ್ ಕುಮಾರ್, ಹೆಚ್.ಸಿ. ಮಲ್ಲಪ್ಪ, ಪುರಂದರ್ ಲೋಕಿಕೆರೆ, ರವಿ ಕುಮಾರ್, ಕೆ.ಹೆಚ್. ಮಂಜುನಾಥ್ ಇದ್ದರು.

# ಪ್ರಶ್ನಿಸುವ, ಚರ್ಚಿಸುವ ಮನೋಭಾವ ಬೆಳಸಿಕೊಳ್ಳಿ

## ನ್ಯಾಯವಾದಿಗಳಿಗೆ ನ್ಯಾಯ ವಿಜ್ಞಾನ ಉಪನ್ಯಾಸ ಮಾಲಿಕೆಯಲ್ಲಿ ಡಾ.ನಟರಾಜ್



ದಾವಣಗೆರೆ, ಮಾ.28- ಪ್ರಸಕ್ತ ದಿನಗಳಲ್ಲಿ ಉಪನ್ಯಾಸ ಕಾರ್ಯಕ್ರಮ ಕೇಳುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ನಿವೃತ್ತ ಪ್ರಾಧ್ಯಾಪಕ ಡಾ. ನಟರಾಜ್ ವ್ಯಾಕುಲತೆ ವ್ಯಕ್ತ ಪಡಿಸಿದರು.

ನಗರದ ಜಿಲ್ಲಾ ಕೋರ್ಟ್ ಭವನದಲ್ಲಿ ಗುರುವಾರ ನಡೆದ ನ್ಯಾಯವಾದಿಗಳಿಗೆ ನ್ಯಾಯ ವಿಜ್ಞಾನ ಉಪನ್ಯಾಸ ಮಾಲಿಕೆ-7 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಳುವ, ಪ್ರಶ್ನಿಸುವ ಮತ್ತು ಚರ್ಚಿಸುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಉಪನ್ಯಾಸ ಕಾರ್ಯಕ್ರಮದಲ್ಲಿ ಯಶಸ್ವಿಗೊಳ್ಳಲಿದೆ ಎಂದರು.

ನ್ಯಾಯಾಲಯದ ಮೂಲ ಸೌಕರ್ಯ ಅಭಿವೃದ್ಧಿಯಾದಂತೆ, ವಕೀಲರ ಕೌಶಲ್ಯಗಳೂ ಸಹ ಅಭಿವೃದ್ಧಿ ಹೊಂದಬೇಕು. ಈ ನಿಟ್ಟಿನಲ್ಲಿ ಹಿರಿಯ ವಕೀಲರ ಸಹಾಯದಿಂದ ಕಿರಿಯ ವಕೀಲರು ಜ್ಞಾನಾರ್ಜನೆ ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಕೀಲರ ಸಂಘವು ಈ ಹಿಂದೆ ಆಯೋಜಿಸಿದ್ದ ಕಾರ್ಯಕ್ರಮಗಳಿಂದ ಜ್ಯೂನಿಯರ್ ವಕೀಲರಿಗೆ ಸಹಾಯಕವಾಗಿರುವುದನ್ನು ಶ್ಲಾಘಿಸಿದರು.

ಮಕ್ಕಳ ಸ್ನೇಹಿ ನ್ಯಾಯಾಲಯದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್. ಶ್ರೀಪಾದ್ ಮಾತನಾಡಿ, ವಕೀಲರು ತಮ್ಮ ಅಪರಾಧಿಕ ಪ್ರಕರಣವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ನ್ಯಾಯ-ವಿಜ್ಞಾನ ಉಪನ್ಯಾಸ ಸಹಾಯಕವಾಗಿದೆ ಎಂದು ಹೇಳಿದರು.

ನ್ಯಾಯಾಧೀಶರು, ವಕೀಲರು, ಪೊಲೀಸರು ಮತ್ತು ವೈದ್ಯರಿಗೆ ಇಂತಹ ಕಾರ್ಯಕ್ರಮ ಮುಖ್ಯವಾಗಿ ಬೇಕು ಎಂದು ಅಭಿಪ್ರಾಯ ಪಟ್ಟರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಕರೆಣ್ಣನವರ ಮಾತನಾಡಿ, ನೈಜವಾಗಿ ನ್ಯಾಯ ನಿರ್ಣಯ ಕೈಗೊಳ್ಳಲು ಅಪರಾಧ ಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಸಹಾಯಕ ವಾಗಲಿದೆ ಎಂದು ಹೇಳಿದರು.

ವಕೀಲರ ಸಂಘದಿಂದ ಇಂತಹ ಕಾರ್ಯಕ್ರಮ ಇನ್ನೂ ಹೆಚ್ಚಾಗಿ ನಡೆಯಲಿ ಎಂದು ಸಲಹೆ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್. ಅರುಣ್ ಕುಮಾರ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಯುವ ವಕೀಲರಿಗೆ ನ್ಯಾಯ ವಿಜ್ಞಾನದ ಅರಿವು ಬಹಳ ಮುಖ್ಯವಾಗಿದೆ ಎಂದು ಹೇಳಿದರು.

ಕಾಲಕಾಲಕ್ಕೆ ಕಾನೂನು ಜ್ಞಾನವನ್ನು ಹರಿತಗೊಳಿಸುವ ನಿಟ್ಟಿನಲ್ಲಿ ಇಂತಹ ಉಪನ್ಯಾಸ ಕಾರ್ಯಕ್ರಮಗಳು ಯುವ ವಕೀಲರಿಗೆ ಸಹಾಯಕವಾಗಲಿವೆ ಎಂದು ಹೇಳಿದರು.

ನ್ಯಾಯಾಧೀಶರಾದ ಕೆ. ದಶರಥ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗೆರೆ, ಪ್ರವೀಣ್ ಕುಮಾರ್, ಸಹ ಕಾರ್ಯದರ್ಶಿ ಎ. ಎಸ್. ಮಂಜುನಾಥ್, ಕಾರ್ಯದರ್ಶಿ ಎಸ್. ಬಸವರಾಜ್ ಹಾಗೂ ಇತರರು ಇದ್ದರು.

# ಯಲವಟ್ಟಿ : ಪ್ರಣವ ಧ್ವಜಾರೋಹಣ



ಮಲೇಬೆನ್ನೂರು, ಮಾ.28- ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಶ್ರೀಗಳ ಮತ್ತು ಶ್ರೀ ನಿತ್ಯಾನಂದ ಶ್ರೀಗಳ ಪುಣ್ಯಾರಾಧನೆ ಕಾರ್ಯಕ್ರಮದ ಅಂಗವಾಗಿ ಗುರುವಾರ ಬೆಳಿಗ್ಗೆ ಪ್ರಣವ ಧ್ವಜಾರೋಹಣವನ್ನು ಮಲೇಬೆನ್ನೂರಿನ ಶಿವ ಸಹಕಾರ ಸಂಘದ ಅಧ್ಯಕ್ಷ ಡಾ.ಬಿ.ಚಂದ್ರಶೇಖರ್ ನೆರವೇರಿಸಿದರು.

ಶ್ರೀ ಯೋಗಾನಂದ ಸ್ವಾಮೀಜಿ, ದಾವಣಗೆರೆಯ ಜಡೆಸಿದ್ಧ ಆಶ್ರಮದ ಶ್ರೀ ಶಿವಾನಂದ ಸ್ವಾಮೀಜಿ, ರಟ್ಟೆಹಳ್ಳಿ ಕಬ್ಬಿಣಕಂಥಿಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಹದಡಿ ಚಂದ್ರಗಿರಿ ಮಠದ ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ, ಹೋತನಹಳ್ಳಿ ಸಿದ್ಧಾಶ್ರಮದ ಶ್ರೀ ಶಂಕರಾನಂದ ಸ್ವಾಮೀಜಿ, ಹುಣಸೆಕಟ್ಟೆಯ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಗ್ರಾಮದ ಜಿ.ಮುರುಗೆಪ್ಪಗೌಡ್ರು, ಜಿ.ಬಸಪ್ಪ ಮೇಷ್ಟ್ರು, ಡಿ.ಯೋಮಕೇಶ್ವರಪ್ಪ, ಜಿ. ಆಂಜನೇಯ, ಕೊಮಾರನಹಳ್ಳಿಯ ಜಿ.ಮಂಜುನಾಥ್ ಪಟೇಲ್, ಯಕ್ಕನಹಳ್ಳಿ ಬಸವರಾಜಪ್ಪ, ಜಿಗಳಿ ಆನಂದಪ್ಪ, ಕುಂಬಳೂರು ವಾಸು, ಕೆ.ಎನ್.ಹಳ್ಳಿ ಹುಗ್ಗಿ ರೇವಣಪ್ಪ, ಕೃಷ್ಣಪ್ಪಜ್ಜ, ಸಿರಿಗೆರೆಯ ಸಿದ್ದೇಶ್, ಕುಂಬಳೂರಿನ ಕೆ.ಕುಬೇರಪ್ಪ, ಗೋಪಾಲಪ್ಪ, ಕಾಮರಾಜ್, ಯಲವಟ್ಟಿಯ ಡಿ.ಸಿದ್ದೇಶ್, ಎ.ಶೇಖರಪ್ಪ, ಬಸವನಗೌಡ, ನಿವೃತ್ತ ಯೋಧ ಶಿವಕುಮಾರ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಕೆಪಿಸಿಸಿ ಎಸ್ಸಿ ವಿಭಾಗದ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಆಯ್ಕೆ



ದಾವಣಗೆರೆ, ಮಾ. 28- ತಾಲ್ಲೂಕಿನ ಆಲೂರುಹಟ್ಟಿ (ಶ್ರೀರಾಮನಗರ) ಹೆಚ್. ರಾಜು ನಾಯ್ಕ ಅವರು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ನೇಮಕಗೊಂಡಿದ್ದಾರೆ.

# ನಗರದಲ್ಲಿಂದು ಯುಗಾದಿ ಕವಿಗೋಷ್ಠಿ

ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಕರ್ನಾಟಕ ವಚನ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಸ್ಫೂರ್ತಿ ಪ್ರಕಾಶನ ತೆಲಿಗೆ ಇವರುಗಳ ಸಂಯುಕ್ತಾಶ್ರಯದಲ್ಲಿ ಯುಗಾದಿ ಕವಿಗೋಷ್ಠಿ - ಕ್ರೋಧಿ ನಾಮ ಸಂವತ್ಸರದ ಸ್ವಾಗತ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ರೋಟರಿ ಬಾಲಭವನದಲ್ಲಿ ಏರ್ಪಡಿಸಲಾಗಿದೆ.

ಕಸಾಪ ಜಿಲ್ಲಾಧ್ಯಕ್ಷರಾದ ಬಿ. ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಜಿ. ಹೆಚ್. ರಾಜಶೇಖರ್ ಗುಂಡಗಟ್ಟಿ ಅವರ ಅಧ್ಯಕ್ಷತೆಯಲ್ಲಿ ಯುಗಾದಿ ಸಂಭ್ರಮ ವಿಷಯ ಕುರಿತು ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿ ಕೆ.ಎಸ್. ವೀರಭದ್ರಪ್ಪ ತೆಲಿಗಿ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಯೋಧ ರಾಮಚಂದ್ರಪ್ಪ, ಚಿಂತಕ-ಸಾಹಿತಿ ಹೆಚ್. ವಿ. ಮಂಜುನಾಥಸ್ವಾಮಿ, ಕನ್ನಡ ಉಪನ್ಯಾಸಕ ಮಾರುತಿ ಶಾಲೆ ಮನೆ, ಸ್ಫೂರ್ತಿ ಪ್ರಕಾಶನದ ಅಧ್ಯಕ್ಷ ಎಂ. ಬಸವರಾಜ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಸಂಘಟನಾ ಕಾರ್ಯದರ್ಶಿ ಸುನೀತಾ ಪ್ರಕಾಶ್ ಉಪಸ್ಥಿತರಿರುವರು.

# ಭದ್ರಾ ನೀರು ಹರಿಸಲು ಭಾರತೀಯ ರೈತ ಒಕ್ಕೂಟ ಒತ್ತಾಯ



ದಾವಣಗೆರೆ, ಮಾ. 28- ಭದ್ರಾ ಅಚ್ಚುಕಟ್ಟು ಪ್ರದೇಶ ದಾವಣಗೆರೆ ವಿಭಾಗದ ಶಿರಮಗೊಂಡನಹಳ್ಳಿ, ನಾಗನೂರು, ಬೆಳವನೂರು, ಶಾಮನೂರು, ಬಿಸಲೇರಿ, ಜರೇಕಟ್ಟೆ, 10 ರ ವಲಯ ಹರಿಹರ ವಿಭಾಗಕ್ಕೆ ನೀರು ಬಿಡುಗಡೆಯಾಗಿ 8 ದಿನಗಳಾದರೂ ತೋಟಗಳಿಗೆ, ದನ-ಕರುಗಳಿಗೆ ನೀರು ಲಭ್ಯವಿಲ್ಲ.

ಕುರ್ಕಿ ಗ್ರಾಮದ ಹತ್ತಿರ ಕಲ್ಪನಹಳ್ಳಿ ಕಡೆಗೆ ಹೋಗುವ ಚಾನಲ್‌ಗೆ ಅಕ್ರಮವಾಗಿ ಗೇಟ್ ಎತ್ತಿ ನೀರು ಬಿಡುವುದರಿಂದ ನಮಗೆ ನೀರು ತಲುಪುವುದಿಲ್ಲ. ಇನ್ನು ಕೇವಲ 4 ದಿನಗಳು ಮಾತ್ರ ನೀರು ಹರಿಯಲಿದ್ದು, ಕೂಡಲೇ ಸೂಕ್ತ ಕ್ರಮ ಜರುಗಿಸಿ ನಮ್ಮ ಭಾಗಕ್ಕೆ ನೀರು ಹರಿಸುವಂತೆ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್ ಮತ್ತಿತರರು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

# ಹರಿಹರ : ಶಿವ ಸಂಚಾರ ಕಾರ್ಯಕ್ರಮ

ಹರಿಹರ, ಮಾ.28- ನಗರದ ಸಿಟಿ ಫ್ಯಾಮಿಲಿ ಸೆಂಟರ್ ವತಿಯಿಂದ ಸಾಧು ವೀರಶೈವ ಸಮಾಜದ ಆಶ್ರಯದಲ್ಲಿ ಏಪ್ರಿಲ್ 1ರಿಂದ 3ರವರೆಗೆ ಶಿವ ಸಂಚಾರ-23 ಕಾರ್ಯಕ್ರಮ ನಡೆಯಲಿವೆ.

ಏಪ್ರಿಲ್ 1ರ ಸಂಜೆ 7.30ರಿಂದ, ಜಯಂತ್ ಕಾಯ್ಕಿಣಿ ರಚಿಸಿದ ಹಾಗೂ ಹುಲುಗಪ್ಪ ಕಟ್ಟಿಮನಿ ನಿರ್ದೇಶನದ 'ಜತೆಗಿರುವವನು ಚಂದಿರ' ನಾಟಕ ಪ್ರದರ್ಶನ ನಡೆಯಲಿದೆ.

ಏಪ್ರಿಲ್ 2ರ ಸಂಜೆ 7.30ರಿಂದ, ಕೆ.ಎಸ್. ಸಾಳುಂಕಿ ರಚಿಸಿದ ಮತ್ತು ಮಾಲತೇಶ್ ಆರ್. ಬಡಿಗೇರ್ ಅವರ ವಿನ್ಯಾಸ ನಿರ್ದೇಶನದ 'ತಾಳಿಯ ತಕರಾರು' ನಾಟ್ಯ ಪ್ರದರ್ಶನವಿದೆ.

ಏಪ್ರಿಲ್ 3ರ ಸಂಜೆ 7.30ರಿಂದ ಡಾ. ನಟರಾಜು ಬೂದಾಳು ರಚಿಸಿದ, ಸಿ. ಬಸವಲಿಂಗಯ್ಯ ನಿರ್ದೇಶನದ 'ಕಲ್ಯಾಣದ ಬಾಗಿಲು' ನಾಟಕ ಪ್ರದರ್ಶನವಾಗಲಿದೆ.

# ರಾಣೇಬೆನ್ನೂರಿನಲ್ಲಿ ನಾಡಿದ್ದು ಮಾಜಿ ಸಚಿವ ಆರ್. ಶಂಕರ್ ಅಭಿಮಾನಿಗಳ ಸಭೆ

ರಾಣೇಬೆನ್ನೂರು, ಮಾ.28- ಮಾಜಿ ಸಚಿವ ಆರ್. ಶಂಕರ್ ಅವರ ಮುಂದಿನ ರಾಜಕೀಯ ಭವಿಷ್ಯ ಯಾವ ಪಕ್ಷದಲ್ಲಿ ಕಂಡುಕೊಳ್ಳಬೇಕು ಯಾವ ಪಕ್ಷ ಅವರಿಗೆ ಶ್ರೇಯಸ್ಸು ತರಬಹುದು ಎಂದು ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಇದೇ ದಿನಾಂಕ 31 ರಂದು ಬೆಳಿಗ್ಗೆ ರಾಣೇಬೆನ್ನೂರಿನ ಅವರ ಮನೆಯಲ್ಲಿ ಶಂಕರ್ ಅಭಿಮಾನಿಗಳ ಸಭೆ ಕರೆಯಲಾಗಿದೆ ಎಂದು ರತ್ನಾಕರ ಕುಂದಾಪೂರ ತಿಳಿಸಿದ್ದಾರೆ. ಬಿ.ಬಿ.ಎಂ.ಪಿ ಉಪ ಮೇಯರ್ ಆರ್. ಶಂಕರ್ ರಾಣೇಬೆನ್ನೂರಿಗೆ ಬಂದು ಶಾಸಕರಾಗಿ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿದ್ದರು. ಉಪಚುನಾವಣೆ ಮತ್ತು ಸಾರ್ವತ್ರಿಕ ಚುನಾವಣೆಯಲ್ಲಿ ಟಿಕೆಟ್ ವಂಚಿತರಾಗಿ ಎನ್‌ಸಿಪಿ ಪಕ್ಷದಿಂದ ಸ್ಪರ್ಧಿಸಿ ಸೋಲುಂಡು ಸುಮಾರು ಒಂದು ವರ್ಷ ಕಾಲ ಬೆಂಗಳೂರಿನಲ್ಲಿ ನೆಲೆಸಿದ್ದರು.

# ಸಿಎನ್‌ಕೆ ಸ್ಮರಣಾರ್ಥ ಪುಸ್ತಕ ವಿತರಣೆ



ದಾವಣಗೆರೆ, ಮಾ. 28- ಈಚೆಗೆ ನಿಧನರಾದ ಮಾಜಿ ಸಚಿವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರ ಸ್ಮರಣೆಗಾಗಿ ಮೌಲಾನಾ ಆಜಾದ್ ಸಂಸ್ಥೆಯ ವತಿಯಿಂದ ನಗರದ ವಿರಕ್ತ ಮಠದ ಶ್ರೀ ಮುರುಘರಾಜೇಂದ್ರ ಶಾಲೆಯಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಇಂದು ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಲಾಯಿತು. ನಾಗಮ್ಮ ಕೇಶವಮೂರ್ತಿಯವರ ಸಾಮಾಜಿಕ ಸೇವೆಯನ್ನು ಶ್ರೀ ಬಸವಪ್ರಭು ಸ್ವಾಮೀಜಿ ಸ್ಮರಿಸಿದರು. ಮೌಲಾನಾ ಆಜಾದ್ ಸಂಸ್ಥೆಯ ಅಧ್ಯಕ್ಷ ಸಿ. ನಸೀರ್ ಅಹಮ್ಮದ್ ಅವರು ಮಕ್ಕಳಿಗೆ ಪೆನ್ನು, ಪುಸ್ತಕಗಳನ್ನು ಉಚಿತವಾಗಿ ವಿತರಿಸಿದರು.

ಈ ಸಂದರ್ಭದಲ್ಲಿ ವರ್ತಕರುಗಳಾದ ಕೆ.ಜಾವೀದ್ ಸಾಬ್, ಕೆ.ಸಿ.ಮಹಮ್ಮದ್, ಡಿ.ರಶೀದ್, ರಾಜಾ, ರೋಷನ್ ಅಲಿ ಮತ್ತು ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ದಾವಣಗೆರೆ ಗೃಹಿಣಿ ಸ್ಪರ್ಧೆ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದಿಂದ 'ದಾವಣಗೆರೆ ಗೃಹಿಣಿ ಸ್ಪರ್ಧೆ-2024'ಯು ಇಂದು ಬೆಳಿಗ್ಗೆ 10-30ಕ್ಕೆ ಕಲಾಕುಂಚ ಕಛೇರಿ ಸಭಾಂಗಣದಲ್ಲಿ ನಡೆಯಲಿದೆ.

ಧಾರವಾಡದ ಋಷಿ ಸಂಸ್ಕೃತಿ ವಿದ್ಯಾಕೇಂದ್ರದ ಮುಖ್ಯಸ್ಥರಾದ ಶ್ರೀಮತಿ ರೇಣುಕಾದೇವಿ ಅವರು ಸಮಾರಂಭವನ್ನು ಉದ್ಘಾಟಿಸಲಿದ್ದು, ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದಾವಣಗೆರೆ ದಕ್ಷಿಣ ಸಂಚಾರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಡಿ.ಹೆಚ್. ನಿರ್ಮಲಾ, ಸಂಸ್ಥೆಯ ಸಂಸ್ಥಾಪಕ ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ, ಕಲಾಕುಂಚ ಎಂ.ಸಿ.ಸಿ. ಶಾಖೆಯ ಅಧ್ಯಕ್ಷರಾದ ಶ್ರೀಮತಿ ಪ್ರಭಾ ರವೀಂದ್ರ ಆಗಮಿಸಲಿದ್ದಾರೆ.

# ಜಿಲ್ಲಾ - ಪ್ರಾದೇಶಿಕ ಪತ್ರಿಕೆಗಳಿಗೆ ಜಾಹೀರಾತು ನೀಡಲು ಒತ್ತಾಯ



ದಾವಣಗೆರೆ, ಮಾ. 28 - ಲೋಕಸಭಾ ಚುನಾವಣೆ ಪ್ರಯುಕ್ತ ಮತದಾರರಲ್ಲಿ ಜಾಗೃತಿ, ಅರಿವು ಮೂಡಿಸುವ, ಮತ ಚಲಾವಣೆಯ ಕುರಿತು ಜಾಹೀರಾತುಗಳನ್ನು ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಬಿಡುಗಡೆ ಮಾಡುವಂತೆ ಕೋರಿ, ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ದಾವಣಗೆರೆ ಜಿಲ್ಲಾ ಘಟಕದಿಂದ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರಿನ್ ಬಾನು ಎಸ್. ಬಳ್ಳಾರಿ ಅವರಿಗೆ ಗುರುವಾರ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಹೆಚ್. ಸುಧಾಕರ, ಜಿಲ್ಲಾಧ್ಯಕ್ಷ ಆರ್.ರವಿ, ಉಪಾಧ್ಯಕ್ಷರಾದ ಕೆ. ಏಕಾಂತಪ್ಪ, ಎ. ಫಕೃದ್ದೀನ್, ಪ್ರಧಾನ ಕಾರ್ಯದರ್ಶಿ ಜೆ.ಎಸ್. ವೀರೇಶ್ , ಖಜಾಂಚಿ ಸುರೇಶ್ ಆರ್. ಕುಣಿಬೆಳಕೆರೆ, ಕಾರ್ಯದರ್ಶಿ ಕೆ.ಹೆಚ್. ಗೋವಿಂದ ರಾಜು, ಸಂಘಟನಾ ಕಾರ್ಯದರ್ಶಿ ಜಿ.ಎಂ.ಮಂಜುನಾಥ್, ಸದಸ್ಯ ಎನ್ .ನಂದನ್ ಕುಮಾರ್ ಸೇರಿದಂತೆ ಇತರರು ಇದ್ದರು.

# ಹರಿಹರ : 24/7 ಯೋಜನೆಗೆ ನೀರಿನ ಬರ : ಟ್ಯಾಂಕರ್ ನೀರಿಗಾಗಿ ಕರೆ ಮಾಡಿ

ಹರಿಹರ,ಮಾ.28- ನಗರಸಭೆ ವ್ಯಾಪ್ತಿಯಲ್ಲಿ ನಿರಂತರ ನೀರು ಸರಬರಾಜು ಯೋಜನೆ (24/7) ವತಿಯಿಂದ ನೀರು ಪೂರೈಸಲಾಗುತ್ತಿದ್ದು, ಆದರೆ ಪ್ರಸ್ತುತ ನಗರಕ್ಕೆ ತುಂಗಭದ್ರಾ ನದಿಯಿಂದ ನಿರಂತರ ನೀರು ಸರಬರಾಜು ಮಾಡಲಾಗುತ್ತಿದ್ದ ಕವಲೆತ್ತು ಗ್ರಾಮದ ತುಂಗಭದ್ರಾ ನದಿ ಪಾತ್ರದಲ್ಲಿ ನೀರಿನ ಹರಿವು ಪೂರ್ಣಸ್ಥಗಿತವಾಗಿರುತ್ತದೆ ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ನದಿಯ ನೀರನ್ನು ಸರಬರಾಜು ಮಾಡಲು ಸಾಧ್ಯವಾಗದೇ ಇರುವ ಕಾರಣದಿಂದ ನಗರದ ವಾರ್ಡ್‌ಗಳ ಸಾರ್ವಜನಿಕರಿಗೆ ಟ್ಯಾಂಕರ್‌ಗಳ ಮೂಲಕ ಪ್ರಸ್ತುತ ನೀರು ಸರಬರಾಜು ಮಾಡ ಲಾಗುತ್ತಿದ್ದು, ನೀರಿನ ಅವಶ್ಯಕತೆ ಇರುವ ಸಾರ್ವಜನಿಕರು ಕೂಡಲೇ ಸಹಾಯವಾಣಿ ದೂರವಾಣಿ: 6366962668 ಸಂಖ್ಯೆಗೆ ಕರೆ ಮಾಡಿ ಕುಡಿಯುವ ನೀರಿನ ಕೊರತೆ ನಿವಾರಿಸಿಕೊಳ್ಳುವಂತೆ ಅವರು ತಿಳಿಸಿದ್ದಾರೆ.

# ಕಬ್ಬಡಿ ಪ್ರೀಮಿಯರ್ ಲೀಗ್ ಪ್ರಯುಕ್ತ ಮ್ಯಾರಥಾನ್



ದಾವಣಗೆರೆ, ಮಾ. 28- ಅಮೆಚೂರ್ ಕಬಡ್ಡಿ ಸಂಸ್ಥೆ, ಜನಪ್ರಿಯ ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಸ್ಥೆ ಇವರ ವತಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದಿನಿಂದ 31ರವರೆಗೆ ನಡೆಯುವ ಕಬ್ಬಡ್ಡಿ ಪ್ರೀಮಿಯರ್ ಲೀಗ್ -24 ಪಂದ್ಯಾವಳಿಗೆ ಜಯದೇವ ವೃತ್ತದಿಂದ ಜಿಲ್ಲಾ ಕ್ರೀಡಾಂಗಣದವರೆಗೆ ನಿನ್ನೆ ಮ್ಯಾರಥಾನ್ ಏರ್ಪಡಿಸಲಾಗಿತ್ತು.

ಈ ಮ್ಯಾರಥಾನ್ ಅನ್ನು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹಾಗೂ ಅಮೆಚೂರ್ ಕಬಡ್ಡಿ ಸಂಸ್ಥೆಯ ಎಂ. ನಾಗರಾಜ್ ಉದ್ಘಾಟಿಸಿದರು.

# ದೈವಜ್ಞ ಬ್ರಾಹ್ಮಣ ಸಮಾಜದ ವಟುಗಳಿಗೆ 'ಬ್ರಹ್ಮೋಪದೇಶ'

ದಾವಣಗೆರೆ, ಮಾ. 28- ಸೋಂದಾ ಕ್ಷೇತ್ರದ ಶ್ರೀ ಸೋದೆ ವಾದಿರಾಜ ಮಠದಲ್ಲಿ ಏಪ್ರಿಲ್ 3 ರಂದು ಶ್ರೀ ಮಠದ ಮುಖ್ಯ ಶಿಷ್ಯರಾದ ದೈವಜ್ಞ ಬ್ರಾಹ್ಮಣ ವಟುಗಳಿಗೆ ತಪ್ತ ಮುದ್ರಾಧಾರಣ ಪುರಸ್ಸರ 'ಬ್ರಹ್ಮೋಪದೇಶ'ವನ್ನು ಉಚಿತವಾಗಿ ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಶ್ರೀ ಸೋದೆ ವಾದಿರಾಜ ಮಠ (9483357005), ಗಿರಿಪ್ರಸಾದ ರಾಯ್ಕರ್ ಹುಬ್ಬಳ್ಳಿ (9980197166) ಇವರನ್ನು ಸಂಪರ್ಕಿಸಬಹುದು.

# ಮುಮುಕ್ಷು ಶ್ರೀ ಮಯಂಕ್ ಮಹಾವೀರ ಸಂಘವಿಯ ಜೈನ್ ಸಂತ ದೀಕ್ಷೆ

## ನಗರದಲ್ಲಿ ಇಂದಿನಿಂದ ನಾಲ್ಕು ದಿನ ಕಾರ್ಯಕ್ರಮ



ದಾವಣಗೆರೆ, ಮಾ.28- ಫರ್ನಿಚರ್ ತಯಾರಕರೂ, ಮಾರಾಟಗಾರರೂ, ವಕೀಲರೂ ಆದ ಸಂಘವಿ ಮಹಾವೀರ ಜೈನ್ ಅವರ 17 ವರ್ಷದ ಪುತ್ರ ಮಯಂಕ್ ಅವರು ಬರುವ ಏಪ್ರಿಲ್ 1 ರ ಸೋಮವಾರ ಲೌಕಿಕ ಸುಖಮಯ ಬದುಕಿನಿಂದ ನಿರ್ಗಮಿಸಿ, ಕಠಿಣವಾದ ಜನ್ಮ ಜನ್ಮಾಂತರಗಳ ಹುಟ್ಟು - ಸಾವುಗಳ ಜಂಜಾಟಗಳಿಂದ ಮುಕ್ತಿ ಹೊಂದಬಹುದಾದಂತಹ ಜೈನ ಸನ್ಯಾಸ ದೀಕ್ಷೆ ಸ್ವೀಕರಿಸಲಿದ್ದಾರೆ.

ರೇಣುಕ ಮಂದಿರದಲ್ಲಿ ಜೈನ ಸಂತರು, ಆಚಾರ್ಯರ ಸಮ್ಮುಖದಲ್ಲಿ ನಡೆಯಲಿರುವ ಈ ಕಾರ್ಯಕ್ರಮವು ಮಹೋತ್ಸವದ ರೂಪದಲ್ಲಿ ಪ್ರಾರಂಭವಾಗಲಿದ್ದು, ನಾಳೆ ದಿನಾಂಕ 29 ಮತ್ತು 30 ನೇ ದಿನಗಳಂದು ಇದೇ ಸಂಬಂಧವಾಗಿ ನಡೆಯಲಿರುವ ಹಲವಾರು ಧಾರ್ಮಿಕ ವಿಧಿವಿಧಾನಗಳ ನಂತರ ದಿನಾಂಕ 31ರ ಭಾನುವಾರ ಸಾಂಸಾರಿಕ ಜೀವನದ ಎಲ್ಲಾ ಸುಖ ಸಂಪತ್ತುಗಳ ತ್ಯಾಗದ ಪ್ರತೀಕವಾಗಿ ಮುಮುಕ್ಷು ಮಯಂಕ್‌ನ ಸಾಂಸಾರಿಕ ಜೀವನದ ಕೊನೆಯ ಬೃಹತ್ ಮೆರವಣಿಗೆ ಜರುಗಲಿದೆ. ಚೌಕೀಪೇಟೆಯ ಶ್ರೀ ಸುಪಾರ್ಶ್ವನಾಥ ಜೈನ ದೇವಸ್ಥಾನದಿಂದ ಮುಂಜಾನೆ 8 ಗಂಟೆಗೆ ಹೊರಟು ರೇಣುಕ ಮಂದಿರ ತಲುಪಲಿದೆ.

31 ರ ಭಾನುವಾರದ ಸಂಜೆ ಈ ದೀಕ್ಷಾರ್ಥಿ ಮಯಂಕ್ ಅವರಿಗೆ ಈ ಲೌಕಿಕ ಜೀವನದಿಂದ ಆಧ್ಯಾತ್ಮಿಕ ಜೀವನದ ಪ್ರಮುಖ ಘಟ್ಟ ಏರಲು ಬೀಳ್ಕೊಡುಗೆ ಸಮಾರಂಭ ಇರುತ್ತದೆ.

ಈ ದೀಕ್ಷಾ ಸಮಾರಂಭದ ಅಂತಿಮ, ಅತೀ ಪ್ರಮುಖ ಮತ್ತು ಅಲೌಕಿಕ ಘಟ್ಟವಾದ ದೀಕ್ಷಾ ಪ್ರಧಾನ ಮತ್ತು ಸ್ವೀಕಾರ ಸಮಾರಂಭವು ಏಪ್ರಿಲ್ ದಿನಾಂಕ 1ನೇ ಸೋಮವಾರ ಬೆಳಿಗ್ಗೆ 8 ಗಂಟೆಗೆ ರೇಣುಕ ಮಂದಿರದಲ್ಲಿ ಪ್ರಾರಂಭವಾಗುವುದು.


**ಶ್ರೀ ವೀರಭದ್ರೇಶ್ವರ ರಥೋತ್ಸವ**



ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಹನಗವಾಡಿ ಗ್ರಾಮದ
**ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು**
ದಿನಾಂಕ 30.03.2024ನೇ ಶನಿವಾರ ಸಂಜೆ 5 ಗಂಟೆಗೆ ವಿವಿಧ ವಾದ್ಯ ಮೇಳಗಳೊಂದಿಗೆ ವಿಜೃಂಭಣೆಯಿಂದ ಜರುಗುವುದು.
ದಿನಾಂಕ 31.03.2024ನೇ ಭಾನುವಾರ ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 12.30 ರವರೆಗೆ
**ಶ್ರೀ ಸ್ವಾಮಿಯ ಗುಗ್ಗಳ ಕಾರ್ಯಕ್ರಮ** ಹಾಗೂ
ಶ್ರೀ ವೀರಗಾಸೆ ತಂಡದವರಿಂದ ಪುರವಂತರು, ಸಮಾಳದವರು ಹಾಗೂ ವಿವಿಧ ಮೇಳಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ದೇವಸ್ಥಾನದ ಆವರಣದಲ್ಲಿ ಅಂತ್ಯಗೊಳ್ಳುವುದು.
ಆದ ಕಾರಣ ಪ್ರತಿ ವರ್ಷದಂತೆ ಈ ವರ್ಷವೂ ಭಕ್ತಾದಿಗಳು ಆಗಮಿಸಿ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.




# ಶ್ರೀ ಬಕ್ಕೇಶ್ವರ ಸ್ವಾಮಿ ನೂತನ ರಥ ಪೂಜೆ





ದಾವಣಗೆರೆ, ಮಾ.28- ನಗರದ ಚೌಕೀಪೇಟೆ ಯಲ್ಲಿರುವ ಶ್ರೀ ಗುರು ಬಕ್ಕೇಶ್ವರ ಸ್ವಾಮಿಯ ನೂತನ ರಥದ ಪೂಜಾ ಹಾಗೂ ಸಮರ್ಪಣಾ ಕಾರ್ಯಕ್ರಮದಲ್ಲಿ ಹೆಬ್ಬಾಳು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಅಥಣಿ ಎಸ್.ವೀರಣ್ಣ, ಮಾಗಾನಹಳ್ಳಿ ಶಿವಾನಂದಪ್ಪ, ವಿನಯ್ ಕುಮಾರ್, ಜಯಣ್ಣ, ಗುರು, ಬಾದಾಮಿ ರುದ್ರೇಶ್, ಆಲದಳ್ಳಿ ಸಿದ್ರಾಮಣ್ಣ ಮುಂತಾಗಿ ಸೇವಾ ಸಮಿತಿ, ರಥೋತ್ಸವ ಸಮಿತಿ ಸದಸ್ಯರುಗಳು, ದೇವರಮನಿ ಶಿವಕುಮಾರ್, ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ ಮತ್ತಿತರರು ಅಲ್ಲಿದ್ದರು.

ಶಾಸಕ ಶಾಮನೂರು ಶಿವಶಂಕರಪ್ಪ, ಬಿ.ಸಿ. ಉಮಾಪತಿ ಮುಂತಾದವರು ಆಗ ಮಿಸಿ, ನೂತನ ರಥ ವೀಕ್ಷಿಸಿದರು. ವೇದಮೂರ್ತಿ ವಿಜಯಕುಮಾರ್ ಮುಂತಾದವರು ಹೋಮ - ಪೂಜಾದಿಗಳನ್ನು ನೆರವೇರಿಸಿದರೆ, ರಥಶಿಲ್ಪಿ ವೀರಾಚಾರ್ ಗೊಪ್ಪೇನಹಳ್ಳಿ ಸಹೋದರರು ಭಾಗವಹಿಸಿದ್ದರು.

ಶ್ರೀ ಬಕ್ಕೇಶ್ವರ ಸ್ವಾಮಿ ಮಹಾರಥೋತ್ಸವವು ಏಪ್ರಿಲ್ 13 ರಂದು ನೆರವೇರಲಿದೆ.

# ಸಾಹಿತಿ ಸುಕನ್ಯಾ ತ್ಯಾವಣಿಗೆ ಅವರಿಗೆ 'ಶಿವಶರಣೆ ನೀಲಾಂಬಿಕೆ ರಾಜ್ಯ' ಪ್ರಶಸ್ತಿ



ದಾವಣಗೆರೆ, ಮಾ.28- ಹಿರಿಯೂರಿನ ವಿಶ್ವ ಕನ್ನಡ ಕಲಾ ಸಂಸ್ಥೆ ವತಿಯಿಂದ ಬೆಂಗಳೂರು ಬಗಲಗುಂಟೆ ಮಹಾಲಕ್ಷ್ಮಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ನಾಳೆ ದಿನಾಂಕ 29ರ ಶುಕ್ರವಾರ ನಡೆಯುವ ವಿಶ್ವ ಕನ್ನಡ ಪ್ರಥಮ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಪ್ರದಾನ ಮಾಡುವ ಜ್ಞಾನಯೋಗಿ ಶಿವಶರಣೆ ನೀಲಾಂಬಿಕೆ ಪ್ರಶಸ್ತಿಗೆ 26 ಮಂದಿ ಮಹಿಳಾ ಸಾಧಕಿಯರು ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಈ. ರವೀಶ್ ತಿಳಿಸಿದ್ದಾರೆ.

ಸುಕನ್ಯಾ ತ್ಯಾವಣಿಗೆ (ದಾವಣಗೆರೆ), ಶೈನಾ ಶ್ರೀನಿವಾಸ ಶೆಟ್ಟಿ (ಬೆಂಗಳೂರು), ಬಿ. ಶಾಂತಕುಮಾರಿ (ಚಿತ್ರದುರ್ಗ), ಡಾ. ಅನುರಾಧ ಕುರುಂಜಿ (ಸುಳ್ಯ), ಕಾವೇರಿ ಎಸ್. ಬಿರಾದಾರ (ಬೀದರ್), ಪದ್ಮನೆಲ್ಲ ತಾಳ ಚಪುರ (ನಂಜನಗೂಡು), ಸುಮಿತ್ರ ಬಿ.ಆರ್. (ಹಾಸನ), ಪ್ರೇಮಲತಾ (ಬೀದರ್), ಕೆ.ಜಿ. ಹೊನ್ನಾದೇವಿ (ಗದಗ), ಪುಷ್ಪಾವತಿ ಟಿ.ಎಸ್. (ಸಾಗರ), ಸುಮನ್ ರಾವ್ (ಮಂಡ್ಯ), ಅನಿತಾ ಕೆ.ಆರ್. (ಶಿರಾ), ಶೋಭಾ ಎಂ. ಕಾಗಿ (ಬೆಂಗಳೂರು), ಡಾ. ಚಿ.ದೇ. ಸೌಮ್ಯ (ಬೆಂಗಳೂರು), ಕಾವ್ಯಶ್ರೀ (ಕೊಡಗು), ಪ್ರೀತಾ ಕೃಷ್ಣ (ವಿರಾಜಪೇಟೆ), ವೇದಾವತಿ ಸೋಮಸುಂದರ, ಪ್ರೇ ಮಾಂಜಲಿ (ಕೊಡಗು), ಕಾವ್ಯಶ್ರೀ ಎಂ.ಕೆ. ವಿರಾಜ ಪೇಟೆ, ಶೃತಿ ಟಿ.ಎಸ್. (ಮೈಸೂರು), ಮೀನಾಕ್ಷಿ ಆರ್. (ಮೈಸೂರು), ಕವಿತಾ ಎಸ್.ಆರ್ (ಹಾಸನ), ಪ್ರಮೀಳಾ ಮಹಾದೇವ್ (ದೊಡ್ಡಬಳ್ಳಾಪುರ), ಹೆಚ್.ಎಸ್. ಪ್ರತಿಮಾ ಹಾಸನ್ (ಹಾಸನ), ಪ್ರಮೀಳಾ ದೀಪಕ್ ಪರ್ಮುದೆ (ಮಂಗಳೂರು) ಆಯ್ಕೆಯಾಗಿದ್ದಾರೆ.

## ಕೇಜ್ರಿವಾಲ್ ಪದಚ್ಯುತಿ ಅರ್ಜಿ ತಳ್ಳಿ ಹಾಕಿದ ದೆಹಲಿ ಹೈಕೋರ್ಟ್

ನವದೆಹಲಿ ಮಾ. 28 – ಜಾರಿ ನಿರ್ದೇಶನಾಲಯದ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಪದಚ್ಯುತಗೊಳಿಸಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ತಳ್ಳಿ ಹಾಕಿದೆ. ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ನೇತೃತ್ವದ ಪೀಠ ಅರ್ಜಿಯನ್ನು ತಳ್ಳಿ ಹಾಕಿದ್ದು, ಸಂವಿಧಾನಿಕ ವ್ಯವಸ್ಥೆ ಕುಸಿದಿರುವ ಬಗ್ಗೆ ನ್ಯಾಯಾಲಯ ನಿರ್ಧಾರ ತೆಗೆದುಕೊಳ್ಳಲಾಗದು ಎಂದು ಹೇಳಿದೆ.

# ಯೋಗ ಸಾಧಕಿ ಲಾವಣ್ಯ ಶ್ರೀಧರ್‌ಗೆ 'ಅಹಲ್ಯಾಬಾಯಿ ಹೋಳ್ಕರ್' ಪ್ರಶಸ್ತಿ



ದಾವಣಗೆರೆ, ಮಾ. 28- ರಾಜ್ಯ ಮತ್ತು ರಾಷ್ಟ್ರ ಮಟ್ಟದ ಯೋಗಾಸನ ಸ್ಪರ್ಧೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ನಗರದ ಎಸ್ಎಎಸ್ಎಸ್ ಯೋಗ ಕೇಂದ್ರದ ಎಸ್.ಪಿ. ಲಾವಣ್ಯ ಶ್ರೀಧರ್ ಅವರಿಗೆ 'ಅಹಲ್ಯಾಬಾಯಿ ಹೋಳ್ಕರ್' ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ವಿಜಯಪುರ ತಾಲ್ಲೂಕಿನ ಮಲಘಾಣದಲ್ಲಿ ಇಂಚಿಗೇರಿ ಅಧ್ಯಾತ್ಮಸಂಪ್ರದಾಯ ಫೌಂಡೇಶನ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇತ್ತೀಚಿಗೆ ಆಯೋಜಿಸಿದ್ದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕಿಯರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಲಾವಣ್ಯ ಶ್ರೀಧರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಲಾವಣ್ಯ ಅವರನ್ನು ಎಸ್ಎಎಸ್ಎಸ್ ಯೋಗ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಎನ್.ಪರಶುರಾಮ್, ಅಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ಎಂ.ಎನ್. ಗೋಪಾಲ್‌ರಾವ್, ನಿರ್ದೇಶಕರಾದ ನಾಗರಾಜ, ರಾಘವೇಂದ್ರ ಎಂ. ಚೌಹಾಣ್, ಅಜ್ಜಯ್ಯ, ಜೆ.ಎಸ್.ವೀರೇಶ್, ಎಂ.ವೈ.ಸತೀಶ್, ಸಾವಿತ್ರಮ್ಮ, ಪತ್ರಕರ್ತ ಎ.ಎನ್.ನಿಂಗಪ್ಪ, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ಪ್ರಧಾನ ಕಾರ್ಯದರ್ಶಿ ಡಾ.ಯು.ಸಿದ್ದೇಶ್ ಅಭಿನಂದಿಸಿದ್ದಾರೆ.

## ನಾಗನೂರು ಕೆ‍ಇಬಿ ಬಸವರಾಜ್ ನಿಧನ



ದಾವಣಗೆರೆ ತಾಲ್ಲೂಕು ನಾಗನೂರು ಗ್ರಾಮದ ವಾಸಿ ದಿ|| ಜರೇಕಟ್ಟೆ ಹನುಮಂತಪ್ಪನವರ ಕೊನೆಯ ಪುತ್ರ **ಕೆ‍ಇಬಿ ಬಸವರಾಜ್** ಅವರು ದಿನಾಂಕ 28.03.2024 ರ ಗುರುವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 42 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.03.2024ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ನಾಗನೂರಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. 93800 15006**

# ಎಂ.ಬಿ.ಎ. ಪರೀಕ್ಷೆಯಲ್ಲಿ ಕೆ. ಸಿರಿಲಕ್ಷ್ಮಿ ಅವರಿಗೆ ರ‍್ಯಾಂಕ್



ದಾವಣಗೆರೆ, ಮಾ.28- ಕಳೆದ ಜುಲೈ 2023ರಲ್ಲಿ ನಡೆದ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿಯ ಎಂ.ಬಿ.ಎ ಪರೀಕ್ಷೆಯಲ್ಲಿ ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಎಂ.ಬಿ.ಎ ಕಾಲೇಜಿನ ಕು. ಕೆ.ಸಿರಿಲಕ್ಷ್ಮಿ ಅವರು 6ನೇ ರ‍್ಯಾಂಕ್ ಪಡೆದಿದ್ದಾರೆ.

ಸಿರಿಲಕ್ಷ್ಮಿ ಅವರನ್ನು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ, ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ಕಾಲೇಜಿನ ಅಧ್ಯಕ್ಷ ಅಥಣಿ ಎಸ್.ವೀರಣ್ಣ, ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ಹೆಚ್.ವಿ. ತ್ರಿಭುವಾನಂದ ಅವರು ಅಭಿನಂದಿಸಿದ್ದಾರೆ.

## ಏ.1ರವರೆಗೆ ಕೇಜ್ರಿವಾಲ್ ಕಸ್ಟಡಿ ವಿಸ್ತರಣೆ

ನವದೆಹಲಿ, ಮಾ. 28 – ಅಬಕಾರಿ ನೀತಿ ಪ್ರಕರಣದಲ್ಲಿ ಬಂಧಿತ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕಸ್ಟಡಿ ಅವಧಿಯನ್ನು ವಿಶೇಷ ನ್ಯಾಯಾಲಯ ಏಪ್ರಿಲ್ 1ರವರೆಗೆ ವಿಸ್ತರಿಸಿದೆ.

ನ್ಯಾಯಾಲಯದ ಎದುರು ಆರೋಪಿಯನ್ನು ಹಾಜರು ಪಡಿಸಿದ್ದ ಜಾರಿ ನಿರ್ದೇಶನಾಲಯ, ಆರು ದಿನಗಳ ಕಸ್ಟಡಿಗೆ ಮನವಿ ಸಲ್ಲಿಸಿತ್ತು. ಐದು ದಿನಗಳಿಂದ ವಿಚಾರಣೆ ನಡೆಸಲಾಗುತ್ತಿದೆ. ಆದರೆ, ಕೇಜ್ರಿವಾಲ್ ನುಣುಚಿಕೊಳ್ಳುವ ಉತ್ತರ ನೀಡುತ್ತಿದ್ದಾರೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

## ನಾಳೆ ಬಸವನಾಳು ಶ್ರೀ ಬಸವೇಶ್ವರ ರಥೋತ್ಸವ, ಇಂದು ಕಂಕಣಧಾರಣೆ



ದಾವಣಗೆರೆ, ಮಾ. 28- ತಾಲ್ಲೂಕಿನ ಬಸವನಾಳು ಗ್ರಾಮದಲ್ಲಿ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ನಾಳೆ ದಿನಾಂಕ 29 ರಂದು ಸಂಜೆ ಕಂಕಣಧಾರಣೆ, ಕಳಸಾರೋಹಣ, ನಾಡಿದ್ದು ದಿನಾಂಕ 30 ರಂದು ಶನಿವಾರ ಸಂಜೆ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ಜರುಗಲಿದೆ.

ಮಾ. 31 ರಂದು ಮಧ್ಯಾಹ್ನ ಬೆಲ್ಲದ ಬಂಡಿ ಉತ್ಸವ ಹಾಗೂ ಸಂಜೆ ಓಕುಳಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ರಾತ್ರಿ 10 ಗಂಟೆಗೆ ಶ್ರೀ ನಂಜುಂಡೇಶ್ವರ ನಾಟಕ ಸಂಘ ತುಮಕೂರು ಇವರಿಂದ 'ಕಿವುಡ ಮಾಡಿದ ಕಿತಾಪತಿ' ಸಾಮಾಜಿಕ ನಾಟಕ ಪ್ರದರ್ಶನವಿದೆ.

# ಪುರುಷೋತ್ತಮಾನಂದಪುರಿ ಶ್ರೀಗಳ ಆಶೀರ್ವಾದ ಪಡೆದ ಡಾ. ಪ್ರಭಾ ಎಸ್ಸೆಸ್ಸೆಂ



ದಾವಣಗೆರೆ, ಮಾ. 28 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಭಗೀರಥ ಪೀಠದ ಚಿನ್ಮೂಲಾದ್ರಿ ಶೀಲಾಪುರಿ ಮಹಾಸಂಸ್ಥಾನದ ಶ್ರೀ ಡಾ. ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಜಿಲ್ಲಾ, ತಾಲ್ಲೂಕು ಉಪ್ಪಾರ ಸಂಘದ ಮುಖಂಡರಾದ ಹೆಚ್. ತಿಪ್ಪಣ್ಣ, ಮತ್ತಿ ಹನುಮಂತಪ್ಪ, ಬಾತಿ ಸಿದ್ದಲಿಂಗಪ್ಪ, ಕೆ.ಬಿ ಗಿರೀಶ್, ನಲ್ಕುಂದ ಹಾಲೇಶ್, ಮಾಗಾನಹಳ್ಳಿ ರಾಜಣ್ಣ, ಎಸ್.ಕೆ.ಮಾಲತೇಶ್, ದೇವೇಂದ್ರಪ್ಪ ಹೊಸಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.




ಶ್ರೀ ಗುರು ಮರುಳಸಿದ್ಧೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ, www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
14 ದಿನಗಳು ಚಾರ್‌ಧಾಮ್ ವಿಶೇಷ ಯಾತ್ರೆ ಜೂನ್ 2024 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ಕಾಶಿ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
ಅಮರ್‌ನಾಥ, ವೈಷ್ಣೋದೇವಿ ಪ್ರವಾಸ
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ರಾಮೇಶ್ವರಂ ಯಾತ್ರೆ ಏಪ್ರಿಲ್ 11, 2024 ರಿಂದ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ. 78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

## ತೇಜಸ್ ಎಂ.ಕೆ.1ಎ ವಿಮಾನದ ಮೊದಲ ಹಾರಾಟ

ಬೆಂಗಳೂರು, ಮಾ. 28 – ತೇಜಸ್ ಎಂ.ಕೆ.1ಎ ಸರಣಿಯ ಮೊದಲ ವಿಮಾನವಾದ ಎಲ್‌ಎ5033 ಮೊದಲ ಹಾರಾಟ ನಡೆಸಿದೆ. ಬೆಂಗಳೂರಿನ ಸರ್ಕಾರಿ ಸ್ವಾಮ್ಯದ ಹೆಚ್.ಎ.ಎಲ್.ನಿಂದ ಮೊದಲ ಹಾರಾಟ ನಡೆಸಲಾಗಿದೆ.

ಮೊದಲ ಬಾರಿಗೆ ಈ ವಿಮಾನ 18 ನಿಮಿಷಗಳ ಹಾರಾಟ ನಡೆಸಿದೆ. ಇದರೊಂದಿಗೆ ಈ ವಿಮಾನ ಉತ್ಪಾದನೆಯಲ್ಲಿ ಹೆಚ್.ಎ.ಎಲ್. ಮಹತ್ವದ ಮೈಲಿಗಲ್ಲು ಸಾಧಿಸಿದೆ. ಈ ವಿಮಾನವು ಆಧುನಿಕ ಎಲೆಕ್ಟ್ರಾನಿಕ್ ರಡಾರ್ ಹಾಗೂ ಮುಂಚೂಣಿ ಸಮರ ಸಾಧನಗಳನ್ನು ಹೊಂದಿದೆ.

|| ಶ್ರೀ ಕಲ್ಲೇಶ್ವರ ಪ್ರಸನ್ನ ||

## ಶಿವಗಣಾರಾಧನೆ ಆಹ್ವಾನ

**ಶರಣ ಬನ್ನಿಹಟ್ಟಿ ಹಾಲಸಿದ್ದಪ್ಪ ಮತ್ತು ಸಹೋದರರು**
ಲಿಂಗದಹಳ್ಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ
ಇವರು ಮಾಡುವ ಶರಣಾರ್ಥಿಗಳು.



ಶರಣ ಬಂಧುಗಳೇ...ದಿನಾಂಕ : 27.03.2024ನೇ ಬುಧವಾರ ಬೆಳಗಿನ ಜಾವ 7.30ಕ್ಕೆ ನನ್ನ ತಮ್ಮ ಶರಣ ಬಿ.ಜಿ. ಕಲ್ಲಪ್ಪ ಇವರ ಧರ್ಮಪತ್ನಿ

**ಶರಣೆ ಸುಮಂಗಳಮ್ಮನವರು**

ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ "ಶಿವಗಣಾರಾಧನೆ"ಯನ್ನು ದಿನಾಂಕ : 31..03.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಲಿಂಗದಹಳ್ಳಿ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುವ,

ಇಂತಿ ದುಃಖತಪ್ತರು : ಶರಣ ಬಿ.ಜಿ. ಹಾಲಸಿದ್ದಪ್ಪ ಮತ್ತು ಸಹೋದರರು ಹಾಗೂ ಮಕ್ಕಳು, ಶರಣ ಬಿ.ಜಿ. ಕಲ್ಲಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬನ್ನಿಹಟ್ಟಿ ವಂಶಸ್ಥರು, ಲಿಂಗದಹಳ್ಳಿ. ಶರಣ ಮುರುಗೇಂದ್ರಪ್ಪ ಮತ್ತು ಸಹೋದರರು ಹಾಗೂ ಮಕ್ಕಳು, ಹನುಮನಹಳ್ಳಿ ಮತ್ತು ಬಂಧು-ಮಿತ್ರರು. ಫೋ. : 94491 79722, 99722 12217

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿವಿನಂತಿ.




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas